ನಡುಬಾಡೆ ಇ-ಪತ್ರಿಕೆ

ನಡುಬಾಡೆ ಕೊಡವ & ಕನ್ನಡ ಇ-ನ್ಯೂಸ್ www.nadubadenews.com

ASDCA No;SCAB13122025/5632149 UDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ

ಸಂಪುಟ:01 ಸಂಚಿಕೆ:44 ದಿನಾಂಕ: 13/11/26, ಶುಕ್ರವಾರ 8951073556 ನಾಳಂಕೆ : ತೊಲ್ಯಾರ್ -28, ಬೊಳ್ಯಾಚೆ

www.nadubadenews.com ಸಂಪಾದಕ: ಚಾಮೆರ ದಿನೇಶ್‌ಬೆಳ್ಯಪ್ಪ nadubadenews@gmail.com @nadubadenews ಪುಟ:1

ಕೊಡವ ಹೆರಿಟೇಜ್ ಬಿಡಾರಕ್ ಪುನಾದ್ಯ 5 ಕೋಟಿ...

ಶಾಸಕ ಡಾ. ಮಂಥರ್ ಗೌಡ ಮೇನತ್





@nadubadewarthe; ನ.13:- ಮಡಿಕೇರಿಲ್ ಕೆಟ್ಟಿಯಂಡುಳ್ಳ ಕೊಡವ ಹೆರಿಟೇಜ್ ಬಿಡಾರ ಪಣಿನ ತೊಡಿಕೆ ತೀಪಕ್ ಸರ್ಕಾರ ಪುನಾದ್ಯ 05ಕೋಟಿ ಬುಡ್‌ಗಡೆ ಮಾಡಿತ್. ಸುಮಾರ್ ಕಾಲತೊಟ್ಟ್ ತೋಪರೆ ಆಯಿತ್ ಬಾಕಿ ಆಯಿತಿಂಜ ಈ ಪಣಿನ ಮಡಿಕೇರಿ ಶಾಸಕ ಡಾ. ಮಂಥರ್ ಗೌಡ ಅವು ಇದಂಗಾಯಿತ್ ಏರ ಮೇನತ್ ಇಟ್ಟಿತ್ ಈ ಪಣ ಬುಡ್‌ಗಡೆ ಮಾಡ್ಚಿಟ್ಟಿತ್, ಬಾಕಿ ಆಯಿತ್ ಎಡೆಲಾಯಿತುಳ್ಳ ಈ ಪಣಿನ ತೊಡಿಕೆ ತೀತಿತ್ ಕೊಡವ ಪರಂಪರೆನ ಉಲಗಮಟ್ಟತ್ ಸಾಕ್ಷಿಗುಡ್ಡೆ ಮಾಡೋಕ್ ತಯಾರಾಂಡೂಂದ್ ಅವು ಎಣ್ಣಿತ್.

ಈ ನ್‌ಟ್ಟ್‌ಲ್ ಪ್ರವಾಸೋದ್ಯಮ ಇಲಾಖೆರ ಆಯುಕ್ತನ ಕುದ್ದ್ ಬೆಂಗಳೂರ್‌ಲ್ ಕಂಡಿತ್ ತಕ್ಕ್ ಬಾಕ್ ಮಾಡ್‌ನ ಮಂಥರ್ ಗೌಡ ಅವು ಉಲಗತೇ ಏರ ಅಪರೂಪತ್‌ರ ಕೊಡವ ಪರಂಪೆರನ ಕಾತ್‌ಬೆಚ್ಚಿತ್, ಉಳ್ತಿ ಬೊಳ್ತುವ ನ್‌ಟ್ಟ್‌ಲ್ ತೊಡಿಕೆ ಕಾರ್ಬಾರ್‌ನ ತೀಕೋಂಡೂಂದ್ ಎಣ್ಣ್‌ಬಿ.

ಸ್ವಾಸ್ಥ ಕೇಂದ್ರ ಸ್ಥಾಪನೆ ಮಾಹಿತಿ ನೀಡಲು ಯೋಧರಲ್ಲಿ ಮನವಿ

@nadubadewarthe; ಮಡಿಕೇರಿ ನ.13: -ಕೊಡಗು ಜಿಲ್ಲೆಯಲ್ಲಿ ಅರೆಸೇನಾಪಡೆಯ ಮಾಜಿ ಯೋಧರು ಹಾಗೂ ಸೇವಾನಿರತ ಯೋಧರು ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ಗ್ರಾಮದಲ್ಲಿ ನೆಲೆಸಿರುತ್ತಾರೆ. ಅವರ ಅವಲಂಬಿತ ಕುಟುಂಬದವರಿಗಾಗಿ ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಯಡಿ (ಸೆಂಟ್ರಲ್ ಗವರ್ನ್‌ಮೆಂಟ್ ಹೆಲ್ತ್ ಸ್ಕೀಂ ಸಿ.ಜಿ.ಎಚ್.ಎಸ್), ಸೌಲಭ್ಯವಿದ್ದು ಕೊಡಗು ಜಿಲ್ಲೆಗೆ ಸ್ವಾಸ್ಥ ಕೇಂದ್ರದ ಅವಶ್ಯಕತೆ ಇದೆ. ಆದ್ದರಿಂದ ನಿವೃತ್ತ ಯೋಧರ ಒಕ್ಕೂಟ ಅರೆಸೇನಾಪಡೆ ಕೊಡಗು ಜಿಲ್ಲಾ ಸಂಘಟನೆಯ ಪದಾಧಿಕಾರಿಗಳು ಸಂಸದರಾದ ಯದುವೀರ್ ಕೃಷ್ಣದತ್ತ ಒಡೆಯರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಮೇರೆ ಸಂಸದರು ನೀಡಿರುವ ಮಾಹಿತಿಯಂತೆ ಕೊಡಗು ಜಿಲ್ಲೆಯಲ್ಲಿ ಮಾಜಿ ಯೋಧರು ಹಾಗೂ ಕೇಂದ್ರ ಸರ್ಕಾರದ ನೌಕರರು ಹಾಗೂ ನಿವೃತ್ತರು ಸೇರಿ ಸಿಜಿಎಚ್‌ಎಸ್ ಆರೋಗ್ಯ ಕಾರ್ಡ್ ಮಾಡಿಸಿಕೊಂಡವರು ಎಷ್ಟು ಜನ ಇದ್ದಾರೆಂದು ನಿಖರ ಮಾಹಿತಿ ಕಲೆ ಹಾಕಿ ನೀಡಿದರೆ ಮಡಿಕೇರಿಗೆ ಸ್ವಾಸ್ಥ ಕೇಂದ್ರವನ್ನು ನೀಡಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದ್ದಾರೆ.

ಅರೆಸೇನಾಪಡೆ ಮಾಜಿ ಯೋಧರ ಒಕ್ಕೂಟದ ಬೇಡಿಕೆಗಳಲ್ಲಿ ಇದು ಪ್ರಮುಖವಾಗಿದ್ದು, ಸದ್ಯದಲ್ಲೇ ಜಿಲ್ಲಾ ಕೇಂದ್ರ ಮಡಿಕೇರಿಗೆ ಆರೋಗ್ಯ ಸ್ವಾಸ್ಥ ಕೇಂದ್ರ ವೆಲ್‌ನೆಸ್ ಸೆಂಟರ್ ತೆರೆಯಲು ಪ್ರಯತ್ನಿಸಲಾಗುವುದು. ಆ ನಿಟ್ಟಿನಲ್ಲಿ ಕೊಡಗು ಜಿಲ್ಲೆಯಲ್ಲಿ ನೆಲೆಸಿರುವ ಅರೆಸೇನಾಪಡೆ ಮಾಜಿ ಯೋಧರು, ಸೇವಾನಿರತರು ಹಾಗೂ ಸಿಜಿಎಚ್‌ಎಸ್ ಯೋಜನೆಗೆ ಒಳಪಡುವ ಕೇಂದ್ರ ಸರ್ಕಾರದ ನೌಕರರು, ನಿವೃತ್ತರು ಆರೋಗ್ಯ ಕಾರ್ಡ್ ಮಾಡಿಸಿರುವವರು ತಮ್ಮ ಮಾಹಿತಿ ನೀಡಲು ಕೋರಲಾಗಿದೆ.

ಮಾಹಿತಿ ನೀಡಲು ನಿವೃತ್ತ(ಮಾಜಿ) ಯೋಧರ ಒಕ್ಕೂಟ ಅರೆಸೇನಾಪಡೆ ಕೊಡಗು ಜಿಲ್ಲೆಯ ಜಿಲ್ಲಾ ಕಚೇರಿ ಸಮಯದಲ್ಲಿ, ಒಕ್ಕೂಟದ ಸಂಚಾಲಕರಾದ ನೂರೇರ ಎಂ.ಭೀಮಯ್ಯ ಅವರನ್ನು ಮೊಬೈಲ್ ನಂಬರ್(ವಾಟ್ಸಪ್) 9481057868 ಸಂಪರ್ಕಿಸುವಂತೆ ಅರೆಸೇನಾಪಡೆಯ ನಿವೃತ್ತ(ಮಾಜಿ) ಯೋಧರ ಒಕ್ಕೂಟದ ಎನ್.ಎಂ.ಭೀಮಯ್ಯ ಅವರು ತಿಳಿಸಿದ್ದಾರೆ.

ನಾಳೆ ಪ್ರಜಾಸೇವಾ ಅಭಿಯಾನ

@nadubadewarthe; ಮಡಿಕೇರಿ ನ.13:- ವಿರಾಜಪೇಟೆ ವಿಧಾನಕ್ಷೇತ್ರ ವ್ಯಾಪ್ತಿಯ ಮಡಿಕೇರಿ ತಾಲ್ಲೂಕಿನ ಬಲ್ಲಮಾವಟಿ ಹಾಗೂ ಸೋಮವಾರಪೇಟೆ ತಾಲ್ಲೂಕಿನ ಕುಸುಬೂರು-ಬೇಳೂರಿನಲ್ಲಿ ಪ್ರಜಾಸೇವಾ ಆಂದೋಲನ ನಡೆಯಲಿದ್ದು, ಬಲ್ಲಮಾವಟಿಯಲ್ಲಿ PSC ಹಾಗೂ ಶಾಸಕರಾದ ಎ.ಎಸ್.ಪೊನ್ನಣ್ಣ ಕುಸೂಬೂರಿನಲ್ಲಿ ಆಸಕ ಡಾ. ಮಂಥರ್ ಗೌಡ ಅವರ ಅಧ್ಯಕ್ಷತೆಯಲ್ಲಿ, ನವೆಂಬರ್, 14 ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ಗ್ರಾಮಸ್ಥರು ತಮ್ಮ ಆಹ್ವಾಲು ಸಲ್ಲಿಸಿ ಪರಿಹಾರ ಪಡೆಯಬಹುದೆಂದು ಪ್ರಕಟಣೆ ತಿಳಿಸಿದೆ.



ಪೂರಕದಿಂದ, ಮಾರಕದೆಡೆಗೆ ಕೊಡಗು ಪ್ರವಾಸೋದ್ಯಮ..

ಕಡಿವಾಣಕ್ಕೆ ಸ್ಥಳೀಯರ ಒತ್ತಾಯ; ಜನಪ್ರತಿಧಿಗಳ ಸಾಥ್...

ಚಾಮೆರ ದಿನೇಶ್‌ಬೆಳ್ಯಪ್ಪ

ಕೊಡಗು ಪ್ರವಾಸೋದ್ಯಮ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಇದರಿಂದಾಗಿ ಕೊಡಗಿನ ಸ್ಥಳೀಯರಿಂದ ಹಿಡಿದು ಬೃಹತ್ ಕಂಪನಿಗಳೂ ಕೂಡ ಕೊಡಗಿನಲ್ಲಿ ಬಂಡವಾಳದ ಮೂಲಕ ತಮ್ಮ ಭವಿಷ್ಯವ ರೂಪಿಸುತ್ತಿವೆ. ಕೊಡಗಿನ ಪ್ರಕೃತಿ ಸೌಂದರ್ಯವೇ ಅಂತದ್ದು, ಇಲ್ಲಿನ ಅದಿ ದೇವತೆ ತಾಯಿ ಕಾವೇರಿ ತಾನು ಹರಿಯುವ ಇಕ್ಕೆಲಗಳಲ್ಲಿಯೂ ಹಸಿರು ಹೊನ್ನನೇ ಬೆಳೆಸುತ್ತಿದೆ. ಅಂತೇ ತನ್ನ ಮೂಲ ನೆಲೆ ಕೊಡಗನ್ನು ದೇವಲೋಕದಂತೇ ವಿಜೃಂಭಿಸುತ್ತಿದ್ದಾಳೆ. ಅಂತಃ ಪ್ರಕೃತಿ ಸೌಂದರ್ಯವನ್ನು ಸವಿಯಲು ಪ್ರಪಂಚದಾದ್ಯಂತದಿಂದ ಪ್ರವಾಸಿಗರ ದಂಡು ತಂಡೋಪ ತಂಡವಾಗಿ ಬರುತ್ತಿವೆ. ಇದರಿಂದ ಸ್ಥಳೀಯ ಪ್ರವಾಸೋದ್ಯಮಿಗಳು, ವ್ಯಾಪಾರಿಗಳು ಸೇರಿದಂತೆ ಜಿಲ್ಲೆಯ ಆರ್ಥಿಕ ಚಟುವಟಿಕೆಗಳು ಚುರುಕುಗೊಂಡಿದ್ದು, ಸಾಂಪ್ರದಾಯಿಕ ಕೃಷಿಯಾಧರಿತ ಜಿಲ್ಲೆ ಎಂಬ ಹಣೆಪಟ್ಟಿಯಿಂದ ಪ್ರವಾಸೋದ್ಯಮ ಕೇಂದ್ರಿತ ವಾಣಿಜ್ಯ ಜಿಲ್ಲೆಯಾಗಿ ಬದಲಾಗಿದೆ.

ಇದರಿಂದ ಸ್ಥಳೀಯವಾಗಿ ಒಂದಷ್ಟು ಉಪಯೋಗ, ಆರ್ಥಿಕ ಪ್ರಗತಿ ಆಗಿರುವುದು ನಿಜ. ಆದರೆ ಅದಕ್ಕೂ ಮೀರಿ ಸ್ಥಳೀಯ ಪರಿಸರ ಮತ್ತು ಜನಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿರುವುದು ಸುಳ್ಳಲ್ಲ. ಬಹುಪಾಲು ಪ್ರವಾಸಿಗರು ಇಲ್ಲಿನ ಸ್ಥಳೀಯ ನಯಮ ಮತ್ತು ಕಟ್ಟುಪಾಡುಗಳ ಅರಿವಿಲ್ಲದೆ ಕೇವಲ ಮೀಜು ಮಸ್ತಿಗಾಗಿಯೇ ಬರುತ್ತಿದ್ದಾರೆ. ಅದರಲ್ಲೂ ಯುವ ಸಮೂಹಗ ಅಂತೂ ಕೇವಲ ಮೋಜಿಗಾಗಿಯೇ ಬರುವವರಿದ್ದಾರೆ. ಹೀಗೆ ಬರುವವರಿಗೆ ಕೊಡಗು ಮತ್ತು ಇಲ್ಲಿಯ ಶ್ರೀಮಂತ ಪರಂಪರೆಯಾಗಲಿ, ಇಲ್ಲಿಯ ಭಾವನೆಯಾಗಲಿ, ನಿಯಮಗಳಾಗಲಿ ಅರಿವಿಗೆ ಬರುವುದೇ ಇಲ್ಲ. ಅದರಲ್ಲೂವಾಹನ ಚಾಲನೆ ಮತ್ತು ದೇವಾಲಯಗಳ ಬಳಿಯಂತೂ ಕೆಲ ಪ್ರವಾಸಿಗರ ಮಿತಿಮೀರಿದ ವರ್ತನೆಯಿಂದಾಗಿ ಸ್ಥಳೀಯರು ರಜಾ ದಿನಗಳಂದು, ಮತ್ತು ವಾರಾಂತ್ಯಗಳಲ್ಲಿ ಮನೆಯಿಂದ ಹೊರಬರಲು ಯೋಚಿಸುವಂತಾಗಿದೆ. ಅದರಲ್ಲೂ ವಾಹನ ಚಾಲನೆ ಅಂತೂ ಅತ್ಯಂತ ದುಸ್ತರವಾಗಿ ಕಾಡುತ್ತಿದೆ. ಹೇಳಿ ಕೇಳೀ ಕೊಡಗು ಸಹನಾಮಯಿಗಳ ನಾಡು, ಇಲ್ಲಿಯ ರಕ್ತದಲ್ಲಿ ಎಷ್ಟು ತಾಳ್ಮೆ ಇದೆಯೋ ಅಷ್ಟೇ ರೋಷಾವೇಷವೂ ಇದೆ. ಒಮ್ಮೆ ಸ್ಥಳೀಯರ ಸಹನೆಯ ಕಟ್ಟೆ ಒಡೆದರೆ ಮತ್ತೆಂದೂ ಪ್ರವಾಸಿಗರು ಜಿಲ್ಲೆಗೆ ಕಾಲಿಡದಂತೇ ತಡೆಯುವ ತಾಕತ್ತು ಜಿಲ್ಲೆಯ ಸ್ಥಳೀಯರಿಗಿದೆ. ಅದು ಸಂಘರ್ಷದ ರೂಪ ತಾಳಿದ್ವೇಶದ ಜ್ವಾಲಾಗ್ನಿ ಇತರೆಡೆಗಳಿಗೂ ಹರಡಬಹುದು. ಇದರ ಪರಿಣಾಮ ಬಂಡವಾಳ ಹಾಕಿರುವ ಸ್ಥಳೀಯರಮೇಲೂ ಆಗಬಹುದು. ಇಂದು ಕೊಡಗು ಎಂದರೆ ಪ್ರೀತಿ ವಾತ್ಸಲ್ಯಕ್ಕೆ ಹೇಗೆ ಹೆಸರಾಗಿದೆಯೋ ಹಾಗೇ, ಮುಂದೊಂದು ದಿನ ದ್ವೇಶ ಮತ್ಸರಕ್ಕೆ ನಾಂದಿಯಾಗಬಹುದು.

ಸರ್ಕಾರ ಅದರಲ್ಲೂ ಪ್ರವಾಸೋದ್ಯಮ ಇಲಾಖೆ ತಕ್ಷಣ ಕಾರ್ಯಪ್ರವೃತ್ತರಾಗಿ, ಪೊಲೀಸ್ ಇಲಾಖೆಯ ಜೊತೆ ಸಂವಹನ ನಡೆಸಿ, ಎಲ್ಲಾ ಆಯಕಟ್ಟಿನ ಪ್ರದೇಶಗಳಲ್ಲಿ, ದೇವಸ್ಥಾನಗಳಲ್ಲಿ, ಮತ್ತು ಹೆದ್ದಾರಿಗಳಲ್ಲಿ ಸೂಕ್ತ ಗಸ್ತು ವ್ಯವಸ್ಥೆ ಮತ್ತು ಸಿಬ್ಬಂಧಿಗಳ ನಿಯೋಜನೆ ಮಾಡಬೇಕಿದೆ. ಅದರಲ್ಲೂ ರಾತ್ರಿ ಸಮಯದಲ್ಲಿ ಗೋಣಿಕೊಪ್ಪ, ಹುಣಸೂರು, ಮಡಿಕೇರಿ ಪೆರಿಯಾಪಟ್ಟಣ ಹೆದ್ದಾರಿಯಲ್ಲಿ ನಿರಂತರ ಗಸ್ತು ಮತ್ತು ಜಾಗೃತಿಯ ವ್ಯವಸಜತೆಯನ್ನು ಮಾಡುವ ಮೂಲಕ, ಪ್ರವಾಸೋದ್ಯಮದ ಸುಗಮ ವ್ಯವಹಾರಕ್ಕೆ ಸಹಕರಿಸಬೇಕಿದೆ.



ಎ. ಎಸ್. ಪೊನ್ನಣ್ಣ
ಮಾನ್ಯ ಮುಖ್ಯ ಮಂತ್ರಿಗಳ ಕಾನೂನು ಸಲಹೆಗಾರರು, ಶಾಸಕರು, ವಿರಾಜಪೇಟೆ

ಕೊಡಗಿನಲ್ಲಿ ಪ್ರವಾಸೋದ್ಯಮ ಬೆಳೆಯಬೇಕು, ಅದರೊಂದಿಗೆ ನಮ್ಮ ಸ್ಥಳೀಯ ಜನಜೀವ ನವೂ ನಿರಾತಂಕವಾಗಿ ಸಾಗಬೇಕು. ಪ್ರವಾಸಿಗರ ಕಾನೂನುಭಾಹಿರ ಚಟುವಟಿಕೆ ಮತ್ತು ನಡಾವಳಿಕೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ, ಸಂಬಂಧ ಪಟ್ಟ ಇಲಾಖೆ ಮತ್ತು ಪೊಲೀಸ್ ಇಲಾಖೆಗೂ ಸೂಕ್ತ ನಿರ್ದೇಶನ ನೀಡಿ, ಕೊಡಗಿನ ಹಿತ ಕಾಪಾಡುವ ಮತ್ತು ಸ್ಥಳೀಯರ ನೆಮ್ಮದಿಗೆ ಪೂರಕವಾದ ಕ್ರಮಗಳನ್ನು ಕೈಗೊಳ್ಳಲಾಗುವುದು. ವಿಶೇಷವಾಗಿ ಗೋಣಿಕೊಪ್ಪ ಹುಣಸೂರು ಮಾರ್ಗದಲ್ಲಿ ಅಗತ್ಯ ಪೆಟ್ರೋಲಿಂಗ್ ಕೈಗೊಳ್ಳಲು ಸೂಚಿಸಲಾಗುವುದು. ಸರ್ಕಾರದ ಮಟ್ಟದಲ್ಲೂ ಸೂಕ್ತ ಕ್ರಮ ವಹಿಸಲಾಗುವುದು.



ಮಂಥರ್ ಗೌಡ
ಶಾಸಕರು, ಮಡಿಕೇರಿ

ಯಾವುದೇ ಪ್ರದೇಶಕ್ಕೆ ಪ್ರವಾಸ ಅಥವಾ ಪ್ರಯಾಣ ಕೈಗೊಂಡರೂ ಅಲ್ಲಿಯ ಸ್ಥಳೀಯ ಕಟ್ಟುಪಾಡುಗಳಿಗೆ ಪೂರಕವಾಗಿ ವರ್ಗತಿಸುವ ಗುಣ ಮನುಷ್ಯನಲ್ಲಿರಬೇಕು. ಕೊಡಗು ತನ್ನದೇ ಆದ ಪರಂಪರೆಯನ್ನು ಹೊಂದಿದ್ದು ನಮ್ಮ ಪರಂಪರೆಗೆ ದಕ್ಕೆ ಯಾಗುತ್ತಿರುವದನ್ನು ಸಹಿಸುವುದಿಲ್ಲ. ಸಂಭದ್ದಪಪಟ್ಟ ಇಲಾಖೆಗಳಿಗೆ ತಕ್ಷಣ ಕ್ರಮ ಕೈಗೊಳ್ಳಲು ಸೂಚಿಸಲಾಗುವುದು. ಮುಂದಿನ ದಿನಗಳಲ್ಲಿ ಜಿಲ್ಲೆಯ ಸೂಕ್ಷ್ಮ ಪ್ರದೇಶಗಳಲ್ಲಿ ಸೂಕ್ತ ಬಂದೋಬಸ್ತ್ ಮತ್ತು ಪ್ರವಾಸಿಗರಿಗೆ ಸೂಕ್ತ ಮಾರ್ಗದರ್ಶನ ವ್ಯವಸ್ಥೆಗೆ ಅಧಿಕಾರಿಗಳಿಗೆ ಸೂಚಿಸಲಾಗುವುದು. ಈ ಕುರಿತು ಸಂಭಂದ ಪಟ್ಟ ಸಚಿವರ ಗಮನಕ್ಕೂ ತರಲಾಗುವುದು



ತೀತಿಮಾಡ ಸೋಮಣ್ಣ
ಸಂಘಟನಾ ಕಾರ್ಯದರ್ಶಿ
ಕೊಡವಾಮೆರ ಕೊಂಡಾಟ

ಕೊಡಗಿನ ಜನತೆ ಕೊಡಗಿಗೆ ಬರುವ ಪ್ರವಾಸಿಗರನ್ನು ತಮ್ಮ ಮನೆಗೆ ಬರುವ ನೆಂಟರಂತೆ ಕಾಣುತ್ತಿದ್ದರು ಕೂಡ ಕೆಲವು ಪ್ರವಾಸಿಗರು ಕೊಡಗನ್ನು ಮತ್ತು ಕೊಡಗಿನ ಜನರ ತಾಳ್ಮೆಯನ್ನು ಕೆಣಕುವ ರೀತಿಯಲ್ಲಿ ವರ್ತಿಸುತ್ತಿರು ವುದು ವಿಪರ್ಯಾಸ...

ಅತಿ ವೇಗದ ಚಾಲನೆ, ಕುಡಿದು ವಾಹನಗಳನ್ನು ಅಡ್ಡಡ್ಡಿಡ್ಡಿ ಮತ್ತು ಅತಿವೇಗವಾಗಿ ಓಡಿಸುವುದು, ಓವರ್ಟೇಕ್ ಮಾಡುವುದು, ಅಸಭ್ಯ ಪದಗಳನ್ನು ಬಳಸುವುದು, ರಸ್ತೆಯಲ್ಲಿ ಖಾಲಿ ಬಾಟಲಿಗಳು ಮತ್ತು ಕಸ ಎಸೆಯುವುದು... ದಯವಿಟ್ಟು ಕೊಡಗು ಪ್ರವಾಸೋದ್ಯಮ ಇಲಾಖೆ, ರೆಸಾರ್ಟ್ ಹೋಂ ಸ್ಟೇ, ಹೋಟೆಲ್ ಮಾಲೀಕರು ತಮ್ಮಲ್ಲಿಗೆ ಬರುವ ಪ್ರವಾಸಿಗರಿಗೆ ಸಭ್ಯತೆಯ ಜೊತೆಗೆ ಸ್ವಚ್ಛತೆಯ ಪಾಠ, ದೇವಸ್ಥಾನಗಳ ಉಡುಗೆ ತೊಡುಗೆಯಂತ ಸಂಸ್ಕೃತಿಯ ಪಾಠವನ್ನು ಕೂಡ ಹೇಳಿ ಕೊಡಬೇಕು



ದಿನೇಶ್ ಕಾರ್ಯಪ್ಪ
ಅಧ್ಯಕ್ಷರು
Coorg Hotels & Resorts Association

ಧಾರ್ಮಿಕ ನಂಬಿಕೆಗಳು ಮತ್ತು ಸ್ಥಳೀಯ ಜನರ ಭಾವನೆಗಳನ್ನು ಗೌರವಿಸುವ ಜವಾಬ್ದಾರಿ ಹೊಂದಿರಬೇಕು. ಈ ನಿಟ್ಟಿನಲ್ಲಿ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಪ್ರವಾಸೋದ್ಯಮ ಇಲಾಖೆ ಹಾಗೂ COHERA ಸೇರಿದಂತೆ ಪ್ರವಾಸೋದ್ಯಮ ಸಂಘಟನೆಗಳು ಒಟ್ಟಾಗಿ ಕಾರ್ಯನಿರ್ವಹಿಸುವ ಅಗತ್ಯವಿದೆ. ಪ್ರಮುಖ ಪ್ರವಾಸಿ ತಾಣಗಳಲ್ಲಿ ಸೂಕ್ತ ನಿಗಾ, ಸಂಚಾರ ನಿಯಂತ್ರಣ, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ಕಠಿಣ ಕ್ರಮ ಹಾಗೂ ಪ್ರವಾಸಿಗರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಹೋಟೆಲ್, ರೆಸಾರ್ಟ್ ಮತ್ತು ಹೋಂಸ್ಟೇಗಳ ಮೂಲಕವೂ ಪ್ರವಾಸಿಗರಿಗೆ ಅಗತ್ಯ ಮಾರ್ಗಸೂಚಿಗಳನ್ನು ತಲುಪಿಸಬಹುದು.

ಪ್ರವಾಸೋದ್ಯಮದ ಬೆಳವಣಿಗೆ ಸ್ಥಳೀಯರ ನೆಮ್ಮದಿ, ಪರಿಸರ ಮತ್ತು ಕೊಡಗಿನ ಸಾಂಸ್ಕೃತಿಕ ಪರಂಪರೆಗೆ ಧಕ್ಕೆಯಾಗದಂತೆ ಇರಬೇಕು. ಜವಾಬ್ದಾರಿಯುತ ಪ್ರವಾಸೋದ್ಯಮವೇ ಕೊಡಗಿನ ಸುಸ್ಥಿರ ಭವಿಷ್ಯಕ್ಕೆ ಅಡಿಪಾಯ. ಧಾರ್ಮಿಕ ನಂಬಿಕೆಗಳು ಮತ್ತು ಸ್ಥಳೀಯ ಜನರ ಭಾವನೆಗಳನ್ನು ಗೌರವಿಸುವ ಜವಾಬ್ದಾರಿ ಹೊಂದಿರಬೇಕು. ಈ ನಿಟ್ಟಿನಲ್ಲಿ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಪ್ರವಾಸೋದ್ಯಮ ಇಲಾಖೆ ಹಾಗೂ COHERA ಸೇರಿದಂತೆ ಪ್ರವಾಸೋದ್ಯಮ ಸಂಘಟನೆಗಳು ಒಟ್ಟಾಗಿ ಕಾರ್ಯನಿರ್ವಹಿಸುವ ಅಗತ್ಯವಿದೆ. ಪ್ರಮುಖ ಪ್ರವಾಸಿ ತಾಣಗಳಲ್ಲಿ ಸೂಕ್ತ ನಿಗಾ, ಸಂಚಾರ ನಿಯಂತ್ರಣ, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ಕಠಿಣ ಕ್ರಮ ಹಾಗೂ ಪ್ರವಾಸಿಗರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಹೋಟೆಲ್, ರೆಸಾರ್ಟ್ ಮತ್ತು ಹೋಂಸ್ಟೇಗಳ ಮೂಲಕವೂ ಪ್ರವಾಸಿಗರಿಗೆ ಅಗತ್ಯ ಮಾರ್ಗಸೂಚಿಗಳನ್ನು ತಲುಪಿಸಬಹುದು.

ಪ್ರವಾಸೋದ್ಯಮದ ಬೆಳವಣಿಗೆ ಸ್ಥಳೀಯರ ನೆಮ್ಮದಿ, ಪರಿಸರ ಮತ್ತು ಕೊಡಗಿನ ಸಾಂಸ್ಕೃತಿಕ ಪರಂಪರೆಗೆ ಧಕ್ಕೆಯಾಗದಂತೆ ಇರಬೇಕು. ಜವಾಬ್ದಾರಿಯುತ ಪ್ರವಾಸೋದ್ಯಮವೇ ಕೊಡಗಿನ ಸುಸ್ಥಿರ ಭವಿಷ್ಯಕ್ಕೆ ಅಡಿಪಾಯ.

ನಡುಬಾಡೆ ಇ_ಪತ್ರಿಕೆ
ASDCA No; SCAB13122025/5632149 UDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ
ದಿನಾಂಕ: 13/11/26, ಶುಕ್ರವಾರ 8951073556 ನಾಳಂಕೆ : ತೊಲ್ಯಾರ್ -28, ಬೊಳ್ಯಾಚೆ
ಸಂಪಾದಕ: ಚಾಮೆರ ದಿನೇಶ್‌ಬೆಳ್ಯಪ್ಪ
www.nadubadenews.com nadubadenews@gmail.com @nadubadenews

ನಾಳೆಯ (14 ನವೆಂಬರ್, 2026) ದ್ವಾದಶ ರಾಶಿಗಳ ಭವಿಷ್ಯ

ಮೇಷ

- ದಿನದ ವಿಶೇಷ: ಹೊಸ ಜವಾಬ್ದಾರಿಗಳು ನಿಮ್ಮ ಹೆಗಲೇರಲಿವೆ. ಉನ್ನತ ಶಿಕ್ಷಣ ಅಥವಾ ದೂರ ಪ್ರಯಾಣದ ಬಗ್ಗೆ ಯೋಚಿಸುತ್ತಿರುವವರಿಗೆ ಅನುಕೂಲಕರ ದಿನ.
- ವೃತ್ತಿ ಮತ್ತು ವ್ಯಾಪಾರ: ಕಚೇರಿಯಲ್ಲಿ ನಿಮ್ಮ ಸೃಜನಶೀಲತೆಗೆ ಮನ್ನಣೆ ಸಿಗಲಿದೆ. ಮೇಲಧಿಕಾರಿಗಳ ಪ್ರಶಂಸೆ ದೊರೆಯಲಿದೆ.
- ಆರೋಗ್ಯ: ಆರೋಗ್ಯದ ಬಗ್ಗೆ ಕಾಳಜಿ ಇರಲಿ. ಅತಿಯಾದ ಓಡಾಟದಿಂದ ಸುಸ್ತು ಉಂಟಾಗಬಹುದು.
- ಶುಭ ಬಣ್ಣ ಹಾಗೂ ಸಂಖ್ಯೆ: ಕೆಂಪು, ಸಂಖ್ಯೆ: 9

ವೃಷಭ

- ದಿನದ ವಿಶೇಷ: ಆರ್ಥಿಕ ವಿಚಾರದಲ್ಲಿ ಎಚ್ಚರಿಕೆಯಿಂದ ಹೆಜ್ಜೆ ಇಡಿ. ಯೋಚಿಸದೆ ಯಾವುದೇ ಹೂಡಿಕೆ ಮಾಡಬೇಡಿ.
- ವೃತ್ತಿ ಮತ್ತು ವ್ಯಾಪಾರ: ವ್ಯಾಪಾರದಲ್ಲಿ ಹೊಸ ಆಲೋಚನೆಗಳು ಲಾಭ ತಂದುಕೊಡಲಿವೆ. ಸಹೋದ್ಯೋಗಿಗಳೊಂದಿಗೆ ಉತ್ತಮ ಬಾಂಧವ್ಯವಿರಲಿ.
- ಕುಟುಂಬ ಮತ್ತು ಪ್ರೀತಿ: ಸಂಗಾತಿಯೊಂದಿಗೆ ಮುಕ್ತವಾಗಿ ಮಾತನಾಡುವುದರಿಂದ ಮನಸ್ತಾಪಗಳು ದೂರವಾಗಲಿವೆ.
- ಶುಭ ಬಣ್ಣ ಹಾಗೂ ಸಂಖ್ಯೆ: ಬಿಳಿ/ಕ್ರೀಮ್, ಸಂಖ್ಯೆ: 1

ಮಿಥುನ

- ದಿನದ ವಿಶೇಷ: ಅತಿಯಾದ ಯೋಚನೆಯಿಂದ ಮಾನಸಿಕ ಆಯಾಸ ಉಂಟಾಗಬಹುದು. ಸಕಾರಾತ್ಮಕ ಯೋಚನೆಗಳಿರಲಿ.
- ವೃತ್ತಿ ಮತ್ತು ವ್ಯಾಪಾರ: ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ. ವ್ಯಾಪಾರದಲ್ಲಿ ಉಳಿತಾಯದತ್ತ ಗಮನ ಹರಿಸಿ.
- ಆರೋಗ್ಯ: ಆರೋಗ್ಯ ಸಾಮಾನ್ಯವಾಗಿರಲಿದೆ, ಆದರೂ ಮಾನಸಿಕ ವಿಶ್ರಾಂತಿ ಅಗತ್ಯ.
- ಶುಭ ಬಣ್ಣ ಹಾಗೂ ಸಂಖ್ಯೆ: ಹಸಿರು, ಸಂಖ್ಯೆ: 2

ಕರ್ಕಾಟಕ

- ಆರ್ಥಿಕವಾಗಿ ಶುಭ ಸುದ್ದಿ ಸಿಗುವ ಸಾಧ್ಯತೆಯಿದೆ. ದೈನಂದಿನ ಕೆಲಸಗಳಲ್ಲಿ ಶಿಸ್ತು ಇರಲಿ.
- ವೃತ್ತಿ ಮತ್ತು ವ್ಯಾಪಾರ: ಕಚೇರಿಯಲ್ಲಿ ನಿಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿ. ಬಾಕಿ ಉಳಿದಿರುವ ಕೆಲಸಗಳು ಪೂರ್ಣಗೊಳ್ಳಲಿವೆ.
- ಕುಟುಂಬ ಮತ್ತು ಪ್ರೀತಿ: ಕುಟುಂಬದ ಸದಸ್ಯರೊಂದಿಗೆ ಸಂತೋಷದ ಕ್ಷಣಗಳನ್ನು ಕಳೆಯುವಿರಿ. ಪ್ರೀತಿ-ವಿಶ್ವಾಸ ಹೆಚ್ಚಾಗಲಿದೆ.
- ಶುಭ ಬಣ್ಣ ಹಾಗೂ ಸಂಖ್ಯೆ: ಬೆಳ್ಳಿ ಬಣ್ಣ, ಸಂಖ್ಯೆ: 2

ಸಿಂಹ

- ದಿನದ ವಿಶೇಷ: ದಿನಪೂರ್ತಿ ಉತ್ಸಾಹದಿಂದ ಕೂಡಿರುವಿರಿ. ಆದಾಗ್ಯೂ, ವಿಪರೀತ ಕೆಲಸದೊತ್ತಡವನ್ನು ಮೈಮೇಲೆ ಎಳೆದುಕೊಳ್ಳಬೇಡಿ.
- ವೃತ್ತಿ ಮತ್ತು ವ್ಯಾಪಾರ: ಆದಾಯವನ್ನು ಹೆಚ್ಚಿಸಿಕೊಳ್ಳಲು ಅನುಭವಿ ವ್ಯಕ್ತಿಗಳ ಸಲಹೆ ಪಡೆದುಕೊಳ್ಳಿ. ಹೊಸ ಯೋಜನೆಗಳಿಗೆ ಚಾಲನೆ ನೀಡಲು ಉತ್ತಮ ದಿನ.
- ಆರೋಗ್ಯ: ಆರೋಗ್ಯ ಅತ್ಯುತ್ತಮವಾಗಿರುತ್ತದೆ, ಆದರೂ ಹೊರಗಿನ ಆಹಾರ ಸೇವನೆ ತಪ್ಪಿಸಿ.
- ಶುಭ ಬಣ್ಣ ಹಾಗೂ ಸಂಖ್ಯೆ: ಕಿತ್ತಳೆ/ಚಿನ್ನದ ಬಣ್ಣ, ಸಂಖ್ಯೆ: 2

ಕನ್ಯಾ

- ದಿನದ ವಿಶೇಷ: ಆರೋಗ್ಯಕ್ಕೆ ಸಂಬಂಧಿಸಿದಂತೆ ಒಳ್ಳೆಯ ಸುದ್ದಿ ಕೇಳಲಿದ್ದೀರಿ. ಬಜೆಟ್ ಪ್ರಕಾರ ಹಣಕಾಸು ನಿರ್ವಹಣೆ ಮಾಡಿ.
- ವೃತ್ತಿ ಮತ್ತು ವ್ಯಾಪಾರ: ನಿಮ್ಮ ನಿಜವಾದ ಸಾಮರ್ಥ್ಯವನ್ನು ಗುರುತಿಸಿ ಮುನ್ನಡೆದರೆ ಯಶಸ್ಸು ಖಂಡಿತ. ಕಚೇರಿಯಲ್ಲಿ ನಿಮ್ಮ ಕಠಿಣ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲಿದೆ.
- ಕುಟುಂಬ ಮತ್ತು ಪ್ರೀತಿ: ಕುಟುಂಬದ ಜವಾಬ್ದಾರಿಗಳು ಹೆಚ್ಚಾಗಬಹುದು. ಎಲ್ಲರೊಂದಿಗೆ ಸಾಮರಸ್ಯ ಕಾಪಾಡಿಕೊಳ್ಳಿ.
- ಶುಭ ಬಣ್ಣ ಹಾಗೂ ಸಂಖ್ಯೆ: ಹಸಿರು, ಸಂಖ್ಯೆ: ೬

ತುಲಾ

- ದಿನದ ವಿಶೇಷ: ಮಾನಸಿಕ ನೆಮ್ಮದಿಗಾಗಿ ಸ್ವಲ್ಪ ಸಮಯವನ್ನು ನಿಮಗಾಗಿ ಮೀಸಲಿಡಿ. ಆರ್ಥಿಕ ಬಿಕ್ಕಟ್ಟುಗಳನ್ನು ಸಂಯಮದಿಂದ ಎದುರಿಸಿ.
- ವೃತ್ತಿ ಮತ್ತು ವ್ಯಾಪಾರ: ಹೊಸ ಸಂಪರ್ಕಗಳು ಮತ್ತು ಒಪ್ಪಂದಗಳು ಏರ್ಪಡುವ ಸಾಧ್ಯತೆಯಿದೆ. ಸಭೆಗಳಲ್ಲಿ ಎಚ್ಚರಿಕೆಯಿಂದ ಮಾತನಾಡಿ.
- ಕುಟುಂಬ ಮತ್ತು ಪ್ರೀತಿ: ಪ್ರೀತಿ ಮತ್ತು ಸಂಬಂಧಗಳಲ್ಲಿ ಭಾವನೆಗಳ ಆಧಾರದ ಮೇಲೆ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಿ.
- ಶುಭ ಬಣ್ಣ ಹಾಗೂ ಸಂಖ್ಯೆ: ಬಿಳಿ, ಸಂಖ್ಯೆ: 8

ವೃಶ್ಚಿಕ

- ದಿನದ ವಿಶೇಷ: ಆರೋಗ್ಯದ ನಿಮಿತ್ತ ಅನಿರೀಕ್ಷಿತ ಖರ್ಚುಗಳು ಎದುರಾಗಬಹುದು. ಆರ್ಥಿಕ ಸ್ಥಿರತೆಗಾಗಿ ಹೊಸ ಮಾರ್ಗ ಹುಡುಕಿ.
- ವೃತ್ತಿ ಮತ್ತು ವ್ಯಾಪಾರ: ಕಠಿಣ ಪರಿಶ್ರಮ ಮುಂದುವರೆಸಿ. ಉದ್ಯೋಗ ಕ್ಷೇತ್ರದಲ್ಲಿ ನಿಮ್ಮ ಮಾತಿಗೆ ಗೌರವ ದೊರೆಯಲಿದೆ.
- ಕುಟುಂಬ ಮತ್ತು ಪ್ರೀತಿ: ನಿಮ್ಮ ಮನಸ್ಸಿಗೆ ಒಪ್ಪುವ ಹೊಸ ಸ್ನೇಹಿತರ ಪರಿಚಯವಾಗಲಿದೆ. ಮನೆಯಲ್ಲಿ ಶಾಂತ ವಾತಾವರಣವಿರುತ್ತದೆ.
- ಶುಭ ಬಣ್ಣ ಹಾಗೂ ಸಂಖ್ಯೆ: ಮರೂನ್ ಅಥವಾ ಕೆಂಪು, ಸಂಖ್ಯೆ: 4

ಧನು

- ದಿನದ ವಿಶೇಷ: ಅದೃಷ್ಟದ ಸಂಪೂರ್ಣ ಬೆಂಬಲ ಸಿಗಲಿದೆ. ದೇವತಾ ಕಾರ್ಯಗಳಲ್ಲಿ ಭಾಗಿ2ಯಾಗುವ ಯೋಗವಿದೆ.
- ವೃತ್ತಿ ಮತ್ತು ವ್ಯಾಪಾರ: ವೃತ್ತಿಪರ ಜೀವನದಲ್ಲಿ ದೊಡ್ಡ ಯಶಸ್ಸು ಹಾಗೂ ಉನ್ನತ ಹುದ್ದೆಯೊಲಿಯುವ ಸೂಚನೆಗಳಿವೆ. ವ್ಯಾಪಾರದಲ್ಲಿ ಲಾಭ ವೃದ್ಧಿಯಾಗಲಿದೆ.
- ಆರೋಗ್ಯ: ಆರೋಗ್ಯ ಉತ್ತಮವಾಗಿರುತ್ತದೆ. ಉತ್ಸಾಹದಿಂದ ದಿನ ಕಳೆಯುವಿರಿ.
- ಶುಭ ಬಣ್ಣ ಹಾಗೂ ಸಂಖ್ಯೆ: ಹಳದಿ, ಸಂಖ್ಯೆ: 3

ಮಕರ

- ದಿನದ ವಿಶೇಷ: ಹಣಕಾಸಿನ ವಿಷಯದಲ್ಲಿ ಎಚ್ಚರಿಕೆ ಅಗತ್ಯ. ಸಾಲದ ವ್ಯವಹಾರಗಳಿಂದ ದೂರವಿರಿ.
- ವೃತ್ತಿ ಮತ್ತು ವ್ಯಾಪಾರ: ಕಚೇರಿಯಲ್ಲಿ ಮೇಲಾಧಿಕಾರಿಗಳ ಸಹಾಯದಿಂದ ಪ್ರಮುಖ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸುವಿರಿ. ಶ್ರಮಕ್ಕೆ ತಕ್ಕ ಫಲ ಸಿಗಲಿದೆ.
- ಕುಟುಂಬ ಮತ್ತು ಪ್ರೀತಿ: ಕುಟುಂಬದ ಹಿರಿಯರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಸಂಗಾತಿಯ ಸಲಹೆಗಳು ನಿಮಗೆ ಉಪಯುಕ್ತವಾಗಲಿವೆ.
- ಶುಭ ಬಣ್ಣ ಹಾಗೂ ಸಂಖ್ಯೆ: ನೀಲಿ ಅಥವಾ ಕಪ್ಪು, ಸಂಖ್ಯೆ: 8

ಕುಂಭ


- ದಿನದ ವಿಶೇಷ: ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ನಿಮ್ಮ ಸಕ್ರಿಯ ಭಾಗಿತ್ವವಿರುತ್ತದೆ. ಮನಸ್ಸಿಗೆ ನೆಮ್ಮದಿ ಸಿಗಲಿದೆ.
- ವೃತ್ತಿ ಮತ್ತು ವ್ಯಾಪಾರ: ಪಾಲುದಾರಿಕೆ ವ್ಯವಹಾರದಲ್ಲಿ ಉತ್ತಮ ಲಾಭ ಗಳಿಸುವಿರಿ. ಹೊಸ ಯೋಜನೆಗಳ ಆರಂಭಕ್ಕೆ ಇದು ಸಕಾಲ.
- ಆರೋಗ್ಯ: ದೈಹಿಕ ದೃಢತೆಗಾಗಿ ಯೋಗ ಮತ್ತು ವ್ಯಾಯಾಮವನ್ನು ದಿನಚರಿಯಲ್ಲಿ ರೂಢಿಸಿಕೊಳ್ಳಿ.
- ಶುಭ ಬಣ್ಣ ಹಾಗೂ ಸಂಖ್ಯೆ: ಆಕಾಶ ನೀಲಿ, ಸಂಖ್ಯೆ: 4

ಮೀನ

- ದಿನದ ವಿಶೇಷ: ದೀರ್ಘಕಾಲದಿಂದ ಬಾಕಿ ಉಳಿದಿದ್ದ ಕೆಲಸಗಳು ಪೂರ್ಣಗೊಳ್ಳಲಿವೆ. ಮನಸ್ಸು ಹಗುರಾಗಿರಲಿದೆ.
- ವೃತ್ತಿ ಮತ್ತು ವ್ಯಾಪಾರ: ಉದ್ಯೋಗಸ್ಥರಿಗೆ ಬಡ್ತಿ ಅಥವಾ ಸ್ಥಳ ಬದಲಾವಣೆಯ ಬಗ್ಗೆ ಶುಭ ಸುದ್ದಿ ಸಿಗಬಹುದು. ಹಣಕಾಸಿನ ಪರಿಸ್ಥಿತಿ ಬಲಗೊಳ್ಳಲಿದೆ.
- ಕುಟುಂಬ ಮತ್ತು ಪ್ರೀತಿ: ದಾಂಪತ್ಯ ಜೀವನ ಮಧುರವಾಗಿರಲಿದೆ. ಮಕ್ಕಳಿಂದ ಸಂತೋಷದ ವಾರ್ತೆ ಕೇಳುವಿರಿ.
- ಶುಭ ಬಣ್ಣ ಹಾಗೂ ಸಂಖ್ಯೆ: ಹಳದಿ ಅಥವಾ ಕೇಸರಿ, ಸಂಖ್ಯೆ: 3

(ಗಮನಿಸಿ: ರಾಶಿ ಭವಿಷ್ಯವು ಸಾಮಾನ್ಯ ಗ್ರಹಚಾರವನ್ನು ಆಧರಿಸಿದ್ದು, ವೈಯಕ್ತಿಕ ಜಾತಕಕ್ಕೆ ಅನುಗುಣವಾಗಿ ಸ್ವಲ್ಪ ಬದಲಾವಣೆಗಳಿರಬಹುದು.)

ತಾತನ ಆಸ್ತಿಯಲ್ಲಿ ಮೊಮ್ಮಕ್ಕಳಿಗೆ ನೇರ ಹಕ್ಕಿಲ್ಲ; ಸುಪ್ರಿಂ ಆದೇಶ



@nadubadewarthe; ನ.13:- Property Rights: ಅಜ್ಜನ ಆಸ್ತಿ ಎಂದಾಕ್ಷಣ ಮೊಮ್ಮಕ್ಕಳಿಗೂ ಅದರಲ್ಲಿ ಜನ್ಮಸಿದ್ಧ ಹಕ್ಕು ಇರುತ್ತದೆ ಎಂದು ಭಾವಿಸುವವರು ಹಲವರಿದ್ದಾರೆ. ಆದರೆ ಆಸ್ತಿ ಯಾವ ರೀತಿಯಲ್ಲಿ ತಂದೆಗೆ ವರ್ಗಾವಣೆಯಾಗಿದೆ ಎಂಬುದು ಕಾನೂನಿನಲ್ಲಿ ಬಹಳ ಮುಖ್ಯವಾಗುತ್ತದೆ. ಈ ವಿಚಾರವಾಗಿ ಸುಪ್ರೀಂ ಕೋರ್ಟ್ (Supreme Court) ಮಹತ್ವದ ತೀರ್ಪು ನೀಡಿದ್ದು, ಆಸ್ತಿ ಹಕ್ಕಿನ ಬಗ್ಗೆ ಸ್ಪಷ್ಟನೆ ನೀಡಿದೆ.

1956ರ ಹಿಂದೂ ಉತ್ತರಾಧಿಕಾರ ಕಾಯ್ದೆಯ (Hindu Succession Act) ಸೆಕ್ಷನ್ 8ರ ಅಡಿಯಲ್ಲಿ ಅಜ್ಜನ ಆಸ್ತಿ (Grand Father Property) ತಂದೆಗೆ ಬಂದಿದ್ದರೆ, ಅದು ಅವರ ವೈಯಕ್ತಿಕ ಆಸ್ತಿಯಾಗುತ್ತದೆ. ಅಂತಹ ಆಸ್ತಿಯಲ್ಲಿ ಮಗನಿಗೆ (Grand Son) ಜನ್ಮದಿಂದಲೇ ಪಾಲು ಕೇಳುವ ಹಕ್ಕಿಲ್ಲ ಎಂದು ನ್ಯಾಯಮೂರ್ತಿಗಳಾದ ಆಗಸ್ಟೀನ್ ಜಾರ್ಜ್ ಮಸಿಹ್ ಮತ್ತು ಸುನೀತಾ ಅಗರ್‌ವಾಲ್ ಅವರ ಪೀಠ ತಿಳಿಸಿದೆ.

ಪ್ರಕರಣದ ಹಿನ್ನೆಲೆ ಏನು?

ತಮಿಳುನಾಡಿನ (Tamil Nadu) ಕುಟುಂಬವೊಂದರಲ್ಲಿ ಸುಮಾರು 1,811 ಚದರ ಅಡಿ ಜಮೀನಿನ ಹಂಚಿಕೆ ವಿಚಾರವಾಗಿ ವಿವಾದ ಉಂಟಾಗಿತ್ತು. 1994ರಲ್ಲಿ ನಡೆದ ರಾಜಿ ಒಪ್ಪಂದದ ಮೂಲಕ ಅಜ್ಜನ ಆಸ್ತಿಯ ಒಂದು ಭಾಗ ಅರ್ಜಿದಾರನ ತಂದೆಗೆ ಸಿಕ್ಕಿತ್ತು. ನಂತರ 1997ರಲ್ಲಿ ತಂದೆ ಆ ಜಮೀನನ್ನು ಇಬ್ಬರು ಖರೀದಿದಾರರಿಗೆ ಮಾರಾಟ ಮಾಡಿದ್ದರು. ಆದರೆ ತಂದೆಗೆ ಬಂದ ಜಮೀನಿನಲ್ಲಿ ತನಗೂ ಅರ್ಧ ಪಾಲು ಬೇಕೆಂದು ಮಗನ ಪರವಾಗಿ ತಾಯಿ ನ್ಯಾಯಾಲಯದ ಮೊರೆ ಹೋಗಿದ್ದರು. ಈ ಆಸ್ತಿ ಜಂಟಿ ಕುಟುಂಬಕ್ಕೆ ಸೇರಿದ್ದು, ಮಗನಿಗೂ ಅದರಲ್ಲಿ ಹಕ್ಕಿದೆ ಎಂಬುದು ಅವರ ವಾದವಾಗಿತ್ತು.

ಸುಪ್ರೀಂ ಕೋರ್ಟ್ ಹೇಳಿದ್ದೇನು?

ಪ್ರಕರಣವನ್ನು ಪರಿಶೀಲಿಸಿದ ಸುಪ್ರೀಂ ಕೋರ್ಟ್, ಹಿಂದೂ ಉತ್ತರಾಧಿಕಾರ ಕಾಯ್ದೆಯ ಸೆಕ್ಷನ್ 8ರ ಅಡಿಯಲ್ಲಿ ಅಜ್ಜನ ಆಸ್ತಿ ವಾರಸುದಾರರಿಗೆ ಹಂಚಿಕೆಯಾದಾಗ, ತಂದೆಗೆ ಬಂದ ಪಾಲು ಅವರ ವೈಯಕ್ತಿಕ ಆಸ್ತಿಯಾಗುತ್ತದೆ ಎಂದು ಸ್ಪಷ್ಟಪಡಿಸಿದೆ.

ಇಂತಹ ಆಸ್ತಿ ಸ್ವಯಂಚಾಲಿತವಾಗಿ ತಂದೆ ಮತ್ತು ಮಕ್ಕಳ ಜಂಟಿ ಕುಟುಂಬದ ಆಸ್ತಿಯಾಗುವುದಿಲ್ಲ. ಹೀಗಾಗಿ ಮಗನಿಗೆ ಕೇವಲ ಜನನದ ಕಾರಣದಿಂದಲೇ ತಂದೆಯ ಆಸ್ತಿಯಲ್ಲಿ ಸಹಪಾಲುದಾರಿಕೆ (Coparcenary Rights) ಸೃಷ್ಟಿಯಾಗುವುದಿಲ್ಲ ಎಂದು ನ್ಯಾಯಪೀಠ ತಿಳಿಸಿದೆ.

ಈ ಮೂಲಕ ಮಗನ ಅರ್ಧ ಪಾಲಿನ ಬೇಡಿಕೆಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ.

ಮೊಮ್ಮಕ್ಕಳಿಗೆ ಯಾವಾಗ ಆಸ್ತಿ ಹಕ್ಕು ಸಿಗಬಹುದು?

ಈ ತೀರ್ಪಿನ ಅರ್ಥ ಮೊಮ್ಮಕ್ಕಳಿಗೆ ಅಜ್ಜನ ಆಸ್ತಿಯಲ್ಲಿ ಯಾವುದೇ ಸಂದರ್ಭದಲ್ಲೂ ಹಕ್ಕಿಲ್ಲ ಎಂದಲ್ಲ. ಆಸ್ತಿ ಪಾರಂಪರಿಕ ಜಂಟಿ ಕುಟುಂಬದ ಆಸ್ತಿಯಾಗಿದ್ದರೆ ಅದರ ಹಕ್ಕುಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಬೇಕಾಗುತ್ತದೆ.

ಅದೇ ರೀತಿ ತಂದೆ ವಿಲ್ ಮಾಡದೆ ಮೃತಪಟ್ಟರೆ, ಅವರ ಆಸ್ತಿಯಲ್ಲಿ ಮಗ, ಮಗಳು, ಪತ್ನಿ ಸೇರಿದಂತೆ ಕಾನೂನುಬದ್ಧ ಮೊದಲನೇ ವರ್ಗದ ವಾರಸುದಾರರಿಗೆ ಹಿಂದೂ ಉತ್ತರಾಧಿಕಾರ ಕಾಯ್ದೆಯ ಪ್ರಕಾರ ಪಾಲು ಸಿಗಬಹುದು.

ಹೀಗಾಗಿ ಅಜ್ಜನಿಂದ ಬಂದ ಆಸ್ತಿ, ಜಂಟಿ ಕುಟುಂಬದ ಆಸ್ತಿ ಮತ್ತು ತಂದೆಯ ಸ್ವಂತ ಆಸ್ತಿ ಇವುಗಳ ನಡುವಿನ ವ್ಯತ್ಯಾಸವನ್ನು ತಿಳಿದುಕೊಳ್ಳುವುದು ಮುಖ್ಯವಾಗಿದೆ.

ಘುತ ಕಾಲದಲ್ಲಿ ಈ ದಿನ... 13 ನವೆಂಬರ್ 2026

⭐ ರೋಹಿತ್ ಶರ್ಮಾ ಅವರ 264 ರನ್‌ಗಳ ವಿಶ್ವದಾಖಲೆ (2014). ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ಶ್ರೀಲಂಕಾ ವಿರುದ್ಧ ನಡೆದ ಏಕದಿನ ಪಂದ್ಯದಲ್ಲಿ ರೋಹಿತ್ ಶರ್ಮಾ 264 ರನ್ ಗಳಿಸಿ ಏಕದಿನ ಕ್ರಿಕೆಟ್ ಇತಿಹಾಸದಲ್ಲೇ ವೈಯಕ್ತಿಕ ಗರಿಷ್ಠ ಮೊತ್ತದ ವಿಶ್ವದಾಖಲೆ ನಿರ್ಮಿಸಿದರು.

⭐ ಮೈಕೆಲ್ ಶುಮಾಕರ್ ಅವರ ಮೊದಲ F1 ಚಾಂಪಿಯನ್‌ಶಿಪ್ (1994). ಫಾರ್ಮುಲಾ 1 ರೇಸಿಂಗ್ ದಿಗ್ಗಜ ಮೈಕೆಲ್ ಶುಮಾಕರ್ ತಮ್ಮ ವೃತ್ತಿಜೀವನದ ಮೊದಲ ವಿಶ್ವ ಚಾಲಕರ ಚಾಂಪಿಯನ್‌ಶಿಪ್ ಪ್ರಶಸ್ತಿಯನ್ನು ಗೆದ್ದುಕೊಂಡರು

⭐ ಲೆನಾಕ್ಸ್ ಲೂಯಿಸ್ ಹೆವಿವೇಟ್ ಚಾಂಪಿಯನ್ (1999). ಬಾಕ್ಸಿಂಗ್ ದಿಗ್ಗಜ ಲೆನಾಕ್ಸ್ ಲೂಯಿಸ್ 12 ಸುತ್ತುಗಳ ಪಂದ್ಯದಲ್ಲಿ ಇವಾಂಡರ್ ಹೋಲಿಫೀಲ್ಡ್ ಅವರನ್ನು ಸೋಲಿಸಿ ವಿಶ್ವ ಹೆವಿವೇಟ್ ಚಾಂಪಿಯನ್ ಪಟ್ಟ ಅಲಂಕರಿಸಿದರು

⭐ ಡ್ಯಾರಿಲ್ ಡಾಕಿನ್ಸ್ ಅವರ ಐತಿಹಾಸಿಕ ಡಂಕ್ (1979). ಎನ್‌ಬಿಎ (NBA) ಆಟಗಾರ ಡ್ಯಾರಿಲ್ ಡಾಕಿನ್ಸ್ ಪಂದ್ಯದ ವೇಳೆ ಅತ್ಯಂತ ಶಕ್ತಿಶಾಲಿಯಾಗಿ ಬಾಲ್ ಡಂಕ್ ಮಾಡಿದ ಪರಿಣಾಮ ಬ್ಯಾಸ್ಕೆಟ್‌ಬಾಲ್ ಬ್ಯಾಕ್‌ಬೋರ್ಡ್ ಪುಡಿಪುಡಿಯಾಯಿತು

⭐ ಕಿಮ್ ಎನ್‌ಜಿ (Kim Ng) ಐತಿಹಾಸಿಕ ನೇಮಕ (2020). ಅಮೆರಿಕದ ಮೇಜರ್ ಲೀಗ್ ಬೇಸ್‌ಬಾಲ್ (MLB) ತಂಡದ (ಮಿಯಾಮಿ ಮಾರ್ಲಿನ್ಸ್) ಜನರಲ್ ಮ್ಯಾನೇಜರ್ ಆಗಿ ನೇಮಕಗೊಂಡ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಕಿಮ್ ಎನ್‌ಜಿ ಪಾತ್ರರಾದರು.

⭐ ವಿಕ್ಟರ್ ವೆಂಬನ್ಯಾಮಾ ಅವರ 50 ಅಂಕಗಳ ಸಾಧನೆ (2024). ಸ್ಯಾನ್ ಆಂಟೋನಿಯೊ ಸ್ಪರ್ಸ್ ಆಟಗಾರ ವಿಕ್ಟರ್ ವೆಂಬನ್ಯಾಮಾ ಒಂದೇ ಪಂದ್ಯದಲ್ಲಿ 50 ಅಂಕಗಳನ್ನು ಗಳಿಸುವ ಮೂಲಕ ಎನ್‌ಬಿಎ ಇತಿಹಾಸದಲ್ಲಿ ಈ ಸಾಧನೆ ಮಾಡಿದ ಅತ್ಯಂತ ಕಿರಿಯ ಸೆಂಟರ್ ಆಟಗಾರ ಎನಿಸಿಕೊಂಡರು

⭐ ಮಹಾರಾಜ ರಂಜಿತ್ ಸಿಂಗ್ ಜನನ (1780). ಸಿಖ್ ಸಾಮ್ರಾಜ್ಯದ ಸ್ಥಾಪಕ ಹಾಗೂ 'ಪಂಜಾಬ್‌ನ ಸಿಂಹ' ಎಂದು ಖ್ಯಾತರಾಗಿದ್ದ ಮಹಾರಾಜ ರಂಜಿತ್ ಸಿಂಗ್ ಅವರು ಈ ದಿನದಂದು ಜನಿಸಿದರು

⭐ ಗಾಂಧೀಜಿಯವರಿಂದ 'ಹಿಂದ್ ಸ್ವರಾಜ್' ರಚನೆ (1909). ಇಂಗ್ಲೆಂಡ್‌ನಿಂದ ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣಿಸುವಾಗ ಮಹಾತ್ಮ ಗಾಂಧೀಜಿ ತಮ್ಮ ಪ್ರಸಿದ್ಧ ಕೃತಿ 'ಹಿಂದ್ ಸ್ವರಾಜ್' ಬರೆಯಲು ಆರಂಭಿಸಿದರು.

⭐ ಹಿಂದಿ ಚಿತ್ರರಂಗದ ನಟಿ ಜೂಹಿ ಚಾವ್ಲಾ ಜನನ (1967). 1984ರ ಮಿಸ್ ಇಂಡಿಯಾ ವಿಜೇತೆ ಮತ್ತು ಬಾಲಿವುಡ್ ಹಾಗೂ ಕನ್ನಡ ಚಿತ್ರರಂಗದ ಖ್ಯಾತ ನಟಿ ಜೂಹಿ ಚಾವ್ಲಾ ಜನಿಸಿದರು

⭐ ವೈದ್ಯಕೀಯ ನಿರ್ಲಕ್ಷ್ಯಕ್ಕೆ ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು (1995). ವೈದ್ಯಕೀಯ ಸೇವೆಯಲ್ಲಿ ನಿರ್ಲಕ್ಷ್ಯ ಕಂಡುಬಂದರೆ ರೋಗಿಗಳು ಗ್ರಾಹಕ ಸಂರಕ್ಷಣಾ ಕಾಯ್ದೆಯಡಿ ಪರಿಹಾರ ಪಡೆಯಲು ಅರ್ಹರು ಎಂದು ಭಾರತದ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿತು

⭐ ಹಾಲೆಂಡ್ ಸುರಂಗ ಮಾರ್ಗ ಉದ್ಘಾಟನೆ (1927). ನ್ಯೂಯಾರ್ಕ್‌ನ ಮ್ಯಾನ್‌ಹ್ಯಾಟನ್ ಮತ್ತು ನ್ಯೂಜೆರ್ಸಿಯನ್ನು ಸಂಪರ್ಕಿಸುವ ವಿಶ್ವದ ಮೊದಲ ಅತಿ ಉದ್ದದ ನೀರಿನಡಿಯ ವಾಹನ ಸುರಂಗ ಮಾರ್ಗ (Holland Tunnel) ಸಾರ್ವಜನಿಕರಿಗೆ ಮುಕ್ತವಾಯಿತು.

⭐ ಸಾರ್ವಜನಿಕ ಬಸ್‌ಗಳಲ್ಲಿ ವರ್ಣಭೇದ ನೀತಿ ರದ್ದು (1956). ಸಾರ್ವಜನಿಕ ಬಸ್‌ಗಳಲ್ಲಿ ಕಪ್ಪು ಮತ್ತು ಬಿಳಿಯರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡುವುದು ಅಸಂವಿಧಾನಿಕ ಎಂದು ಅಮೆರಿಕದ ಸುಪ್ರೀಂ ಕೋರ್ಟ್ ತೀರ್ಪು ನೀಡಿತು

⭐ ನೆವಾಡೊ ಡೆಲ್ ರೂಯಿಜ್ ಜ್ವಾಲಾಮುಖಿ ದುರಂತ (1985). ಕೊಲಂಬಿಯಾದಲ್ಲಿ ಜ್ವಾಲಾಮುಖಿ ಸ್ಫೋಟಗೊಂಡು ಉಂಟಾದ ಮಣ್ಣಿನ ಪ್ರವಾಹದಿಂದ (Armero tragedy) ಸುಮಾರು 25,000 ಜನರು ಪ್ರಾಣ ಕಳೆದುಕೊಂಡರು.

⭐ ಮೊದಲ ವರ್ಲ್ಡ್ ವೈಡ್ ವೆಬ್ (WWW) ಪುಟ ರಚನೆ (1990). ಟಿಮ್ ಬರ್ನರ್ಸ್-ಲೀ ಅವರು ಇಂಟರ್ನೆಟ್ ಇತಿಹಾಸದ ಮೊದಲ ತಿಳಿದಿರುವ ವೆಬ್ ಪುಟವನ್ನು ಬರೆದರು

⭐ ಪ್ಯಾರಿಸ್ ಭಯೋತ್ಪಾದಕ ದಾಳಿ (2015). ಫ್ರಾನ್ಸ್‌ನ ರಾಜಧಾನಿ ಪ್ಯಾರಿಸ್‌ನ ವಿವಿಧೆಡೆ ನಡೆದ ಭಯೋತ್ಪಾದಕ ದಾಳಿಯಲ್ಲಿ 130 ಅಮಾಯಕರು ಮೃತಪಟ್ಟರು

ಸಂಗ್ರಹ;
ಕರಿನೆರವಂಡ ಡ್ಯಾನಿ ಕುಶಾಲಪ್ಪ



ಉದ್ಯೋಗ ಮಾಹಿತಿ...

1. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - FDA & SDA ಬೃಹತ್ ನೇಮಕಾತಿ)
 * ಹುದ್ದೆಗಳ ವಿವರ: ಪ್ರಥಮ ದರ್ಜೆ ಸಹಾಯಕರ (FDA), ದ್ವಿತೀಯ ದರ್ಜೆ ಸಹಾಯಕರ (SDA), ಅಕೌಂಟ್ಸ್ ಅಸಿಸ್ಟೆಂಟ್ ಹಾಗೂ ವಾರ್ಡನ್ ಹುದ್ದೆಗಳು.
 * ಖಾಲಿ ಹುದ್ದೆಗಳು: ಒಟ್ಟು 5,431 ಹುದ್ದೆಗಳು (ಉಳಿಕೆ ಮೂಲ ವೃಂದ ಹಾಗೂ ಕಲ್ಯಾಣ ಕರ್ನಾಟಕ ವಲಯ).
 * ವಿದ್ಯಾರ್ಹತೆ: 2ನೇ ಪಿಯುಸಿ (PUC) ಅಥವಾ ಯಾವುದೇ ಮಾನ್ಯತೆ ಪಡೆದ ಪದವಿ (Degree).
 * ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 34,100 ರಿಂದ ರೂ. 92,500+ ವರೆಗೆ.
 * ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25 ನವೆಂಬರ್ 2026 (ಶುಲ್ಕ ಪಾವತಿಗೆ 26 ನವೆಂಬರ್ 2026).
 * ಅಧಿಕೃತ ವೆಬ್‌ಸೈಟ್: https://cetonline.karnataka.gov.in
2. ಕರ್ನಾಟಕ ಲೋಕ ಸೇವಾ ಆಯೋಗ (KPSC - ಗೆಜೆಟೆಡ್ ಪ್ರೊಬೇಷನರ್ಸ್ KAS)
 * ವಿವರ: 319 ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳ (ತಹಶೀಲ್ದಾರ್, ಉಪವಿಭಾಗಾಧಿಕಾರಿ ಇತ್ಯಾದಿ)

1. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - FDA & SDA ಬೃಹತ್ ನೇಮಕಾತಿ)
 * ಹುದ್ದೆಗಳ ವಿವರ: ಪ್ರಥಮ ದರ್ಜೆ ಸಹಾಯಕರ (FDA), ದ್ವಿತೀಯ ದರ್ಜೆ ಸಹಾಯಕರ (SDA), ಅಕೌಂಟ್ಸ್ ಅಸಿಸ್ಟೆಂಟ್ ಹಾಗೂ ವಾರ್ಡನ್ ಹುದ್ದೆಗಳು.
 * ಖಾಲಿ ಹುದ್ದೆಗಳು: ಒಟ್ಟು 5,431 ಹುದ್ದೆಗಳು (ಉಳಿಕೆ ಮೂಲ ವೃಂದ ಹಾಗೂ ಕಲ್ಯಾಣ ಕರ್ನಾಟಕ ವಲಯ).
 * ವಿದ್ಯಾರ್ಹತೆ: 2ನೇ ಪಿಯುಸಿ (PUC) ಅಥವಾ ಯಾವುದೇ ಮಾನ್ಯತೆ ಪಡೆದ ಪದವಿ (Degree).
 * ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 34,100 ರಿಂದ ರೂ. 92,500+ ವರೆಗೆ.
 * ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25 ನವೆಂಬರ್ 2026 (ಶುಲ್ಕ ಪಾವತಿಗೆ 26 ನವೆಂಬರ್ 2026).
 * ಅಧಿಕೃತ ವೆಬ್‌ಸೈಟ್: https://cetonline.karnataka.gov.in
2. ಕರ್ನಾಟಕ ಲೋಕ ಸೇವಾ ಆಯೋಗ (KPSC - ಗೆಜೆಟೆಡ್ ಪ್ರೊಬೇಷನರ್ಸ್ KAS)
 * ವಿವರ: 319 ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳ (ತಹಶೀಲ್ದಾರ್, ಉಪವಿಭಾಗಾಧಿಕಾರಿ ಇತ್ಯಾದಿ)

4. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - Junior Engineer & Technical Posts)
 * ಹುದ್ದೆಗಳ ವಿವರ: ಅಸಿಸ್ಟೆಂಟ್ ಟೌನ್ ಪ್ಲಾನರ್, ಕಿರಿಯ ಇಂಜಿನಿಯರ್ (Junior Engineer - Civil) ಹಾಗೂ ಡ್ರಾಫ್ಟ್ಸ್‌ಮನ್ ಹುದ್ದೆಗಳು.
 * ಖಾಲಿ ಹುದ್ದೆಗಳು: 218 ಹುದ್ದೆಗಳು (RPC ಮತ್ತು ಕಲ್ಯಾಣ ಕರ್ನಾಟಕ).
 * ವಿದ್ಯಾರ್ಹತೆ: ಸಿವಿಲ್ ಇಂಜಿನಿಯರಿಂಗ್ ಅಥವಾ ಸಂಬಂಧಿತ ಟ್ರೇಡ್‌ನಲ್ಲಿ ಡಿಪ್ಲೊಮಾ (Diploma).
 * ಸಂಬಳ: ರೂ. 54,175 ರಿಂದ ರೂ. 99,400 ರವರೆಗೆ (ಮಾಸಿಕ).
 * ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 26 ನವೆಂಬರ್ 2026.
 * ಅಧಿಕೃತ ವೆಬ್‌ಸೈಟ್: https://cetonline.karnataka.gov.in/kea
5. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - Female Supervisor Recruitment)
 * ಹುದ್ದೆಗಳ ವಿವರ: ಮಹಿಳಾ ಮೇಲ್ವಿಚಾರಕಿ (Female Supervisor - Group-C) ಹುದ್ದೆಗಳು.
 * ಖಾಲಿ ಹುದ್ದೆಗಳು: 141 ಹುದ್ದೆಗಳು.
 * ವಿದ್ಯಾರ್ಹತೆ: ಸಂಬಂಧಿತ ವಿಷಯದಲ್ಲಿ ಪದವಿ ಅಥವಾ ಸರ್ಕಾರದ ನಿಯಮಾನುಸಾರ ವಿದ್ಯಾರ್ಹತೆ.
 * ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ಆಕರ್ಷಕ ವೇತನ ಹಾಗೂ ಭತ್ಯೆಗಳು.
 * ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28 ನವೆಂಬರ್ 2026.
 * ಅಧಿಕೃತ ವೆಬ್‌ಸೈಟ್: https://cetonline.karnataka.gov.in

ಕೊಡಗು ಜಿಲ್ಲೆಯ ವಿಶೇಷ ಹವಾಮಾನ ವರದಿ...

ನಾಳೆ ಚಳಿ ಹೆಚ್ಚಿರಲಿದೆ...

- ಕೊಡಗು ಜಿಲ್ಲೆಯ ನಾಳೆಯ ಹವಾಮಾನ ವರದಿ (ನವೆಂಬರ್ 14, ಶನಿವಾರ)
- ಹಗಲಿನ ವಾತಾವರಣ: ಜಿಲ್ಲೆಯಲ್ಲಿ ಭಾಗಶಃ ಮೋಡ ಕವಿದ ಹಾಗೂ ಆಹ್ಲಾದಕರ ವಾತಾವರಣವಿರಲಿದ್ದು (Partly Cloudy), ಗರಿಷ್ಠ ತಾಪಮಾನವು 26°C ತಲುಪಲಿದೆ. ವಾತಾವರಣದಲ್ಲಿ ತೇವಾಂಶವು ಶೇಕಡಾ 72% ರಷ್ಟಿರಲಿದ್ದು, ಯುವಿ (UV) ಸೂಚ್ಯಂಕವು 6 ರಷ್ಟಿರಲಿದೆ.
- ಮಳೆಯ ಮುನ್ಸೂಚನೆ: ಹಗಲಿನಲ್ಲಿ ಮಳೆಯಾಗುವ ಸಂಭವವು ಅತ್ಯಂತ ಕಡಿಮೆ ಇದ್ದು (ಶೇಕಡಾ 10% ರಷ್ಟು ಮಾತ್ರ), ರಾತ್ರಿಯ ಸಮಯದಲ್ಲಿಯೂ ಮಳೆಯ ಸಾಧ್ಯತೆ ಶೇಕಡಾ 15% ಇರಲಿದೆ. ಜಿಲ್ಲೆಯ ಕೆಲವು ಭಾಗಗಳಲ್ಲಿ ಮುಂಜಾನೆ ಮಂಜು ಕವಿದ ವಾತಾವರಣ ಕಂಡುಬರಬಹುದು.
- ರಾತ್ರಿಯ ವಾತಾವರಣ: ರಾತ್ರಿ ವೇಳೆಯು ತಂಪಾದ ಗಾಳಿಯೊಂದಿಗೆ ಮೋಡ ಕವಿದ ವಾತಾವರಣ ಮುಂದುವರಿಯಲಿದ್ದು, ಕನಿಷ್ಠ ತಾಪಮಾನವು 18°C ವರೆಗೆ ಕುಸಿಯಲಿದೆ.
- ಗಾಳಿಯ ದಿಕ್ಕು ಮತ್ತು ವೇಗ: ಗಾಳಿಯು ಪೂರ್ವ-ಈಶಾನ್ಯ ದಿಕ್ಕಿನಿಂದ ಗಂಟೆಗೆ ಸುಮಾರು 10 ಮೈಲಿ ವೇಗದಲ್ಲಿ ಬೀಸಲಿದೆ.

ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ವಿದ್ಯಾರ್ಥಿವೇತನ ಜಾಗೃತಿ ಕಾರ್ಯಾಗಾರ...

@nadubadewarthe; ನ.11:- ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ಹಾಗೂ ವಿವಿಧ ವಿದ್ಯಾರ್ಥಿವೇತನ ಯೋಜನೆಗಳ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಸಿಗ್ಮಪೀಡಿಯಾ ಮತ್ತು ಉಮ್ಮತ್ ಒನ್ ಕೊಡಗು ಚಾರಿಟೇಬಲ್ ಟ್ರಸ್ಟ್ ಜಂಟಿ ಆಶ್ರಯದಲ್ಲಿ ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ವಿದ್ಯಾರ್ಥಿವೇತನ ಜಾಗೃತಿ ಕಾರ್ಯಾಗಾರ ನಡೆಯಿತು.ಕಾರ್ಯಾಗಾರದಲ್ಲಿ ಸಿಗ್ಮಪೀಡಿಯಾ ಸಂಸ್ಥೆಯ ಸ್ಥಾಪಕ ಹಾಗೂ ಸಿಇಒ ಅಮೀನ್ ಇ. ಮುದಸ್ಸರ್ ಮುಖ್ಯ ಭಾಷಣಕಾರರಾಗಿ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಕುರಿತು ಮಾಹಿತಿ ನೀಡಿದರು. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಆರ್ಥಿಕ ಪರಿಸ್ಥಿತಿ ಯಾವುದೇ ವಿದ್ಯಾರ್ಥಿಯ ಉನ್ನತ ಶಿಕ್ಷಣಕ್ಕೆ ಅಡ್ಡಿಯಾಗಬಾರದು. ಪ್ರತಿಭಾವಂತ ಹಾಗೂ ಆಸಕ್ತ



ವಿದ್ಯಾರ್ಥಿಗಳಿಗೆ ಸರ್ಕಾರ ಮತ್ತು ವಿವಿಧ ಖಾಸಗಿ ಸಂಸ್ಥೆಗಳಿಂದ ಹಲವಾರು ವಿದ್ಯಾರ್ಥಿಗಳು ಲಭ್ಯವಿದೆ. ವಿದ್ಯಾರ್ಥಿಗಳು ಇಂತಹ ಅವಕಾಶಗಳ ಬಗ್ಗೆ ಸರಿಯಾದ ಮಾಹಿತಿ ಪಡೆದುಕೊಂಡು, ಅರ್ಹತೆಗೆ ಅನುಗುಣವಾಗಿ ಅರ್ಜಿ ಸಲ್ಲಿಸಬೇಕು. ವಿದ್ಯಾರ್ಥಿವೇತನದ ಮೂಲಕ ರೂ.1 ಲಕ್ಷದವರೆಗೂ ಆರ್ಥಿಕ ನೆರವು ಪಡೆಯಲು ಅವಕಾಶವಿದ್ದು ವಿದ್ಯಾರ್ಥಿಗಳು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು. 2001ರಿಂದ ಇವರೆಗೆ 5 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮಾರ್ಗದರ್ಶನ ನೀಡಿರುವ ತಮ್ಮ ಅನುಭವವನ್ನು ಹಂಚಿಕೊಂಡ ಅವರು, ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವ ವಿಧಾನ, ಅಗತ್ಯ ದಾಖಲೆಗಳು, ಅರ್ಹತಾ ಮಾನದಂಡಗಳು ಹಾಗೂ ವಿವಿಧ ಯೋಜನೆಗಳ ಕುರಿತು ವಿವರಿಸಿದರು. ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಡೀನ್ ಡಾ.ಲೋಕೇಶ್ ಎ.ಜೆ ಅವರು ಮಾತನಾಡಿ, ಉನ್ನತ ಶಿಕ್ಷಣವು ಪ್ರತಿಯೊಬ್ಬ ವಿದ್ಯಾರ್ಥಿಯ ಭವಿಷ್ಯ ರೂಪಿಸುವ ಪ್ರಮುಖ ಹಂತವಾಗಿದೆ. ಆರ್ಥಿಕ ಸಮಸ್ಯೆಯಿಂದಾಗಿ ಯಾವುದೇ ವಿದ್ಯಾರ್ಥಿ ಶಿಕ್ಷಣದಿಂದ ವಂಚಿತರಾಗಬಾರದು.

ವಿದ್ಯಾರ್ಥಿಗಳು ಶ್ರಮ, ಶಿಸ್ತು ಮತ್ತು ನಿರಂತರ ಅಧ್ಯಯನದ ಮೂಲಕ ತಮ್ಮ ಗುರಿ ಸಾಧಿಸಬೇಕು ಎಂದು ಕರೆ ನೀಡಿದರು. ಪ್ರಸ್ತಾವಿಕವಾಗಿ ಮಾತನಾಡಿದ ಉಮ್ಮತ್ ಒನ್ ಕೊಡಗು ಚಾರಿಟೇಬಲ್ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಖಾಲಿದ್ ಹಾಕತ್ತೂರು ಅವರು ಕಳೆದ ಐದು ವರ್ಷಗಳಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಸಂಸ್ಥೆಯು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿದೆ ಎಂದರು. ಸರಕಾರಿ ಮತ್ತು ಖಾಸಗಿ ಸಂಸ್ಥೆಗಳ ಮೂಲಕ ದೊರೆಯುವ ವಿದ್ಯಾರ್ಥಿವೇತನವನ್ನು ಪಡೆಯುವ ಕುರಿತು ವಿದ್ಯಾರ್ಥಿಗಳಿಗೆ ಇರುವ ಮಾಹಿತಿಯ ಕೊರತೆಯನ್ನು ಈ ಕಾರ್ಯಾಗಾರದ ಮೂಲಕ ತುಂಬಲಾಗಿದೆ. ಸಿಗ್ಮಪೀಡಿಯಾ ಮತ್ತು ಉಮ್ಮತ್ ಒನ್ ಕೊಡಗು ಚಾರಿಟೇಬಲ್ ಟ್ರಸ್ಟ್‌ನ ಈ ಜಂಟಿ ಪ್ರಯತ್ನಕ್ಕೆ ವಿದ್ಯಾರ್ಥಿಗಳಿಂದ ಉತ್ತಮ ಸ್ಪಂದನೆ ದೊರೆಯಿತು. ಸಂಸ್ಥೆಯಿಂದ ತಮಗೆ ದೊರೆತ ಆರ್ಥಿಕ ಪ್ರೋತ್ಸಾಹದ ಕುರಿತು ಅಭಿಪ್ರಾಯ ಹಂಚಿಕೊಂಡರು. ಕಾರ್ಯಾಗಾರದ ಮೂಲಕ ವಿದ್ಯಾರ್ಥಿಗಳಿಗೆ ಲಭ್ಯವಿರುವ ವಿವಿಧ ವಿದ್ಯಾರ್ಥಿವೇತನ ಯೋಜನೆಗಳು ಹಾಗೂ ಅವುಗಳನ್ನು ಪಡೆಯುವ ಪ್ರಕ್ರಿಯೆಯ ಕುರಿತು ಉಪಯುಕ್ತ ಮಾಹಿತಿ ನೀಡಲಾಯಿತು.

ರೈಟರ್ ಬೇಕು
ವಿರಾಜಪೇಟೆ-ಗೋಣಿಕೊಪ್ಪ ನಡುವಿನ, ಕೊಳತೋಡ್ - ಬೈಗೋಡ್ ಗ್ರಾಮದ ಕಾಫಿ ತೋಟಕ್ಕೆ ರೈಟರ್ ಬೇಕಾಗಿದ್ದಾರೆ.
ಸಂಸಾರಸ್ತರಿಗೆ ಆದ್ಯತೆ. ವಸತಿ ಸೇರಿದಂತೆ ಇತರ ಸೌಲಭ್ಯಗಳು ಲಭ್ಯವಿದೆ.
ಸಂಪರ್ಕಕ್ಕೆ;
9448005671
9449393093

ಕೊಡಗಿನ ಏಕಮಾತ್ರ ಅಧಿಕೃತ ಇ-ಪೇಪರ್ ನಡುಬಾಡೆ ನ್ಯೂಸ್‌ಗೆ ನಿಮ್ಮ ಸಕಾರ ಇಂದಿನಂತೆ ಮುಂದೆಯೂ ಇರಲಿ...

ಕೂಗೆಕೋಡಿ ಅಂಬೇಡ್ಕರ್ ಯುವಕ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ..



@nadubadewarthe; ಸೋಮವಾರಪೇಟೆ: ನ.11:- ಸಂಘದ ಸಭಾಂಗಣದಲ್ಲಿ ನಡೆದ ಸರ್ವಸದಸ್ಯರ ಸಭೆಯಲ್ಲಿ ಮುಂದಿನ ಒಂದು ವರ್ಷಕ್ಕೆ ನೂತನ ಅಧ್ಯಕ್ಷರಾಗಿ ಕೆ.ಜೆ. ಧರ್ಮಪ್ಪ, ಉಪಾಧ್ಯಕ್ಷರಾಗಿ ಚಂದ್ರಶೇಖರ್, ಕಾರ್ಯದರ್ಶಿಯಾಗಿ ವಿನೋದ್ ಕುಮಾರ್, ಖಜಾಂಚಿಯಾಗಿ ಪ್ರದೀಪ್, ಗೌರವ ಸಲಹೆಗಾರರಾಗಿ ರವಿರುದ್ರಯ್ಯ ಹಾಗೂ ಹೂವಯ್ಯ, ನಿರ್ದೇಶಕರಾಗಿ ಹರೀಶ್, ಮೂರ್ತಿ, ಸಂಪತ್, ಪುಟ್ಟಸ್ವಾಮಿ ಆಯ್ಕೆಯಾಗಿದ್ದಾರೆ.

ಕೊಡವುರ ಆದ್ಯ ಪಿಂಞ ಒರೇ ಓರ್ ಅಧಿಕೃತ ಇ-ಪೇಪರ್ ನಡುಬಾಡೆಕ್ ಇಂದ್ ಪೋಲೆ ಎಂದೂ ನಿಂಗಡ ಒತ್ತಾಸೆ ಇಕ್ಕಡ್...

ಸಮಸ್ತ S.Y.S ಕ್ಯಾಂಪ್ ಉದ್ಘಾಟನಾ ಕಾರ್ಯಕ್ರಮ...



@nadubadewarthe; ನ.11:- ಸಮಸ್ತ S Y S ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ನವೆಂಬರ್ 8 ಮಂಗಳವಾರ ಎಮ್ಮೆಮಾಡು ದರ್ಗಾದಲ್ಲಿ ಅಂತ್ಯ ವಿಶ್ರಾಂತಿ ಪಡೆಯುತ್ತಿರುವ ಸೂಫಿ ಶಹೀದ್ (ರ ಅ) ರವರ ಸನ್ನಿಧಿಯಲ್ಲಿ ಅಲ್ ಬಿದಾಯ ಕ್ಯಾಂಪಿನ ಜಿಲ್ಲಾ ಮಟ್ಟದ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಸಮಸ್ತ ಕೇಂದ್ರ ಮುಶಾವರ ಸದಸ್ಯರೂ ಕೊಡಗಿನ ಸಹ ಖಾಝಿಗಳಾದ ಶೈಖುನಾ ಎಂ.ಎಂ ಅಬ್ದುಲ್ಲಾ ಫೈಝಿ ಉದ್ಘಾಟನೆ ನೆರವೇರಿಸಿದರು. ಸಮಸ್ತ ಎಸ್ ವೈ ಎಸ್ ಜಿಲ್ಲಾ ಸಮಿತಿಯ ಅಡೀನದಲ್ಲಿ ಕೊಡಗಿನಲ್ಲಿ ಕಾರ್ಯಚರಿಸುತ್ತಿರುವ 30ಕ್ಕಿಂತ ಅಧಿಕ ಶಾಖೆಗಳಲ್ಲಿ ಡಿಸೆಂಬರ್ 30 ಕ್ಕಿಂತ ಮುಂಚಿತವಾಗಿ ಕಾರ್ಯಕರ್ತರಲ್ಲಿ ಆಧ್ಯಾತ್ಮಿಕ ಚಿಂತನೆ ಮೂಡಿಸುವುದರೊಂದಿಗೆ ನಾತ್ಮಕ ಚಿಂತನೆಗಳು ಮತ್ತು ಸಾಮಾಜಿಕ ಕಳಕಳಿಯ ಅರಿವು ಮೂಡಿಸುವುದು ಹಾಗೂ ಕ್ರಿಯಾಶೀಲತೆಯಿಂದ ಸಾತ್ವಿಕ ಬದುಕು ಕಟ್ಟಿಕೊಳ್ಳುವುದರ ಅನಿವಾರ್ಯತೆಯ ಬಗ್ಗೆ ಶಾಖೆಗಳಲ್ಲಿ ಅಧ್ಯಯನ ಶಿಬಿರವನ್ನು ಶಿಸ್ತು ಬದ್ಧವಾಗಿ ನಡೆಸಬೇಕಾದ ಕಾರ್ಯಕ್ರಮವಾಗಿದೆ ಅಲ್ - ಬಿದಾಯ ಶಿಬಿರ. ಜಿಲ್ಲಾ ಮಟ್ಟದ ಉದ್ಘಾಟನಾ ಕಾರ್ಯಕ್ರಮದಲ್ಲಿ ಕೊಡಗು ಸಮಸ್ತ ಪ್ರಧಾನ ಕಾರ್ಯದರ್ಶಿ ಎ .ಸಿ ಉಸ್ತಾದ್ ಉಸ್ಮಾನ್ ಫೈಝಿ , S Y S ಕೊಡಗು ಜಿಲ್ಲಾಧ್ಯಕ್ಷರಾದ ಸಿಪಿಎಂ ಬಶೀರ್ ಹಾಜಿ , SYS ಜಿಲ್ಲಾ ಕೋಶಾಧಿಕಾರಿ ಉಮ್ಮರ್ ಫೈಝಿ , ಎಸ್.ವೈ.ಎಸ್ ಜಿಲ್ಲಾ ನಾಯಕರಾದ ಇಕ್ಬಾಲ್ ಮುಸ್ಲಿಯಾರ್ ನೆಲ್ಲಿಹುಡಿಕೇರಿ ಹುಡಿಕೇರಿ , ಅಬ್ದುಲ್ ಸಲಾಂ ನೇಲ್ಲಾ ಹುಡಿಕೇರಿ , ಅಶ್ರಫ್ ಪೊನ್ನಂಪೇಟೆ , ಶೌಕತ್ ಗೋಜಿನಕೊಪ್ಪ,ಅಬ್ದುಲ್ ರೆಹಮಾನ್ ಗೋಜಿನಕೊಪ್ಪ , ಇಬ್ರಾಹಿಂ ಹಾಜಿ ಎಮ್ಮೆಮಾಡು , ಅಹಮದ್ ಮುಸ್ಲಿಯಾರ್ , ಮುಹಮ್ಮದ್ ಅರುಫ್ ಹರಿ ,ಉಮರ್ ಮುಸ್ಲಿಯಾರ್ , ಇನ್ನಿತರ ಜಿಲ್ಲಾ ಹಾಗೂ ವಲಯ ನಾಯಕರು ಕಾರ್ಯಕ್ರಮದಲ್ಲಿ ಭಾಗವಹಿಸಿದರು . S Y S ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಶ್ರಫ್ ಫೈಝಿ ಕ್ರಮ ಕಾರ್ಯಕ್ರಮದಲ್ಲಿ ಸ್ವಾಗತಿಸಿ ವಂದಿಸಿದರು.

ಮಿತಿಮೀರಿ ಪ್ರವಾಸಿಗರಿಂದ ಸೂಕ್ಷ್ಮ ಪರಿಸರ ಕೊಡಗಿನ ಮೇಲೆ ಒತ್ತಡ; ನಿವೃತ್ತ ಕರ್ನಲ್ ಸಿ.ಪಿ. ಮುತ್ತಣ್ಣ ಕಳವಳ...



@nadubadewarthe; ಮಡಿಕೇರಿ: ನ.11:- – ಪುಟ್ಟ ಕೊಡಗಿನ ಪರಿಸರದ ಸಾಮರ್ಥ್ಯವನ್ನು ಮೀರಿ ಪ್ರವಾಸಿಗರು ಜಿಲ್ಲೆಗೆ ಆಗಮಿಸುತ್ತಿದ್ದು, ಇದರಿಂದ ಇಲ್ಲಿನ ಸೂಕ್ಷ್ಮ ಪರಿಸರ ವ್ಯವಸ್ಥೆಯ ಮೇಲೆ ತೀವ್ರ ಒತ್ತಡ ಉಂಟಾಗುತ್ತಿದೆ. ಪ್ರವಾಸೋದ್ಯಮವನ್ನು ಮತ್ತಷ್ಟು ವಿಸ್ತರಿಸುವ ಬದಲು ನಿಯಂತ್ರಿತ ಹಾಗೂ ಜವಾಬ್ದಾರಿಯುತ ಪ್ರವಾಸೋದ್ಯಮಕ್ಕೆ ಆದ್ಯತೆ ನೀಡುವುದು ಇಂದಿನ ಅಗತ್ಯವಾಗಿದೆ ಎಂದು ಎನ್ವಿರಾನ್‌ಮೆಂಟಲ್ ಅಂಡ್ ಹೆಲ್ತ್ ಫೌಂಡೇಷನ್ ಇಂಡಿಯಾದ ಗೌರವ ಕಾರ್ಯದರ್ಶಿ, ನಿವೃತ್ತ ಕರ್ನಲ್ ಸಿ.ಪಿ. ಮುತ್ತಣ್ಣ ಅಭಿಪ್ರಾಯಪಟ್ಟಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡಗು ಜಿಲ್ಲೆ ಮಿತಿಮೀರಿದ ಪ್ರವಾಸೋದ್ಯಮದಿಂದಾಗಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಜಿಲ್ಲೆಯ ಸೂಕ್ಷ್ಮ ಪರಿಸರ ವ್ಯವಸ್ಥೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ ದೃಷ್ಟಿಯಿಂದ ಪ್ರವಾಸಿಗರ ಸಂಖ್ಯೆಯನ್ನು ನಿಯಂತ್ರಿಸುವುದು ಅನಿವಾರ್ಯವಾಗಿದೆ ಎಂದರು. ಕೊಡಗು ಜಿಲ್ಲೆಯಲ್ಲಿ ಸುಮಾರು ಆರು ಲಕ್ಷ ಜನಸಂಖ್ಯೆಯಿದ್ದು, ವಾರ್ಷಿಕವಾಗಿ 40 ಲಕ್ಷಕ್ಕೂ ಅಧಿಕ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಪ್ರವಾಸೋದ್ಯಮದಿಂದ ಸ್ಥಳೀಯ ಆರ್ಥಿಕತೆಗೆ ಕೆಲವು ಪ್ರಯೋಜನಗಳಿದ್ದರೂ, ಮಿತಿಮೀರಿದ ಪ್ರವಾಸೋದ್ಯಮದಿಂದ ಸಂಚಾರ ದಟ್ಟಣೆ, ಕಸದ ಸಮಸ್ಯೆ, ನೀರು ಸೇರಿದಂತೆ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಒತ್ತಡ ಹಾಗೂ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ದಕ್ಷಿಣ ಭಾರತದ ಕೋಟ್ಯಂತರ ಜನರ ಜೀವನಾಧಾರವಾಗಿರುವ ಕಾವೇರಿ ನದಿಯ ಪ್ರಮುಖ ಜಲಾನಯನ ಪ್ರದೇಶ ಕೊಡಗಾಗಿದೆ. ಇಂತಹ ಮಹತ್ವದ ಪರಿಸರ ಸೂಕ್ಷ್ಮ ಪ್ರದೇಶವನ್ನು ಪ್ರವಾಸೋದ್ಯಮದ ಹೆಸರಿನಲ್ಲಿ ಹಾಳುಗೆಡವಲು ಅವಕಾಶ ನೀಡಬಾರದು ಎಂದು ಹೇಳಿದರು.

ಹೊಸ ಹೋಟೆಲ್, ರೆಸಾರ್ಟ್‌ಗಳ ನಿರ್ಮಾಣಕ್ಕೆ ನಿರ್ಬಂಧ: ಜಿಲ್ಲೆಯಲ್ಲಿ ಹೊಸ ಹೋಟೆಲ್‌ಗಳು ಮತ್ತು ರೆಸಾರ್ಟ್‌ಗಳ ನಿರ್ಮಾಣಕ್ಕೆ ಪರವಾನಗಿ ನೀಡುವುದನ್ನು ಸ್ಥಗಿತಗೊಳಿಸಬೇಕು. ಈಗಾಗಲೇ ಹೋಂಸ್ಟೇಗಳ ಸಂಖ್ಯೆ ಮಿತಿಮೀರಿದ್ದು, ಅವುಗಳ ಮೇಲೆಯೂ ಸೂಕ್ತ ನಿಯಂತ್ರಣ ಹೇರಬೇಕಾಗಿದೆ ಎಂದು ಒತ್ತಾಯಿಸಿದರು.

ಆನ್‌ಲೈನ್ ಪಾಸ್ ವ್ಯವಸ್ಥೆ ಜಾರಿಗೆ ಸಲಹೆ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯು ರಾಜ್ಯದ ಎಲ್ಲ ಜಿಲ್ಲೆಗಳ ಪ್ರವಾಸಿ ತಾಣಗಳ ವಿವರಗಳನ್ನು ಒಳಗೊಂಡ ಅಧಿಕೃತ ವೆಬ್‌ಸೈಟ್ ರೂಪಿಸಬೇಕು. ಪ್ರವಾಸಿಗರು ತಾವು ಭೇಟಿ ನೀಡಲು ಉದ್ದೇಶಿಸಿರುವ ಜಿಲ್ಲೆ ಹಾಗೂ ಪ್ರವಾಸಿ ತಾಣವನ್ನು ಆಯ್ಕೆ ಮಾಡಿಕೊಂಡು ಆನ್‌ಲೈನ್ ಮೂಲಕ ಪ್ರವೇಶ ಪಾಸ್ ಪಡೆಯುವ ವ್ಯವಸ್ಥೆ ಜಾರಿಗೆ ತರಬೇಕು ಎಂದು ಸಲಹೆ ನೀಡಿದರು.

ಕೊಡಗಿನಂತಹ ಪ್ರವಾಸಿಗರ ಒತ್ತಡ ಹೆಚ್ಚಿರುವ ಜಿಲ್ಲೆಯಲ್ಲಿ ಪ್ರತಿ ಪ್ರವಾಸಿ ತಾಣಕ್ಕೆ ದಿನವೊಂದಕ್ಕೆ ಗರಿಷ್ಠ 150 ಪಾಸ್‌ಗಳನ್ನು ಮಾತ್ರ ವಿತರಿಸಬೇಕು. ಪ್ರತಿ ಪ್ರವಾಸಿಗರಿಗೆ 500 ರೂ. ಪ್ರವೇಶ ಶುಲ್ಕ ವಿಧಿಸಬೇಕು. ಇದರೊಂದಿಗೆ ನಾಲ್ಕು ಚಕ್ರದ ವಾಹನಗಳಿಗೆ ಹೆಚ್ಚುವರಿಯಾಗಿ 500 ರೂ. ಹಾಗೂ ವ್ಯಾನ್ ಮತ್ತು ಬಸ್‌ಗಳಿಗೆ 3,000 ರೂ. ಶುಲ್ಕ ನಿಗದಿಪಡಿಸಬೇಕು ಎಂದು ತಿಳಿಸಿದರು. ಈ ಮೂಲಕ ಸಂಗ್ರಹವಾಗುವ ಆದಾಯದ ಒಂದು ಭಾಗವನ್ನು ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಅಥವಾ ಕೆಎಸ್‌ಟಿಡಿಸಿಗೆ ನೀಡಬೇಕು. ಉಳಿದ ಮೊತ್ತವನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ, ನಗರಸಭೆ ಅಥವಾ ಅರಣ್ಯ ಇಲಾಖೆಯ ಮೂಲಕ ಸ್ಥಳೀಯ ಪ್ರವಾಸಿ ತಾಣಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂದರು.

ಸ್ವಚ್ಛತೆ ಮತ್ತು ನಿರ್ವಹಣೆಯ ಉದ್ದೇಶದಿಂದ ಪ್ರತಿ ಪ್ರವಾಸಿ ತಾಣವನ್ನು 15 ದಿನಗಳಿಗೊಮ್ಮೆ ಒಂದು ದಿನ ಮುಚ್ಚುವ ವ್ಯವಸ್ಥೆ ಜಾರಿಗೆ ತರಬೇಕು. ಆದರೆ, ಕೊಡಗಿನ ಸ್ಥಳೀಯರು ಧಾರ್ಮಿಕ ವಿಧಿವಿಧಾನಗಳು ಹಾಗೂ ಸಾಂಪ್ರದಾಯಿಕ ಆಚರಣೆಗಳಿಗಾಗಿ ಭಾಗಮಂಡಲ, ತಲಕಾವೇರಿ ಸೇರಿದಂತೆ ಪವಿತ್ರ ಸ್ಥಳಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ಯಾವುದೇ ತೊಂದರೆಯಾಗದಂತೆ ವಿಶೇಷ ಪ್ರವೇಶ ಅನುಮತಿ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಮೂಲಸೌಕರ್ಯವಿಲ್ಲದ ಹೋಂಸ್ಟೇ, ರೆಸಾರ್ಟ್‌ಗಳ ವಿರುದ್ಧ ಕ್ರಮಕ್ಕೆ ಆಗ್ರಹ: ಸಂಸ್ಥೆಯ ಸದಸ್ಯ ಗೋಪಿನಾಥ್ ತಿಮ್ಮಯ್ಯ ಮಾತನಾಡಿ, ಮಿತಿಮೀರಿದ ಪ್ರವಾಸೋದ್ಯಮದಿಂದಾಗಿ ಸ್ಥಳೀಯರು ನೆಮ್ಮದಿ ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಜಿಲ್ಲೆಯಲ್ಲಿ ರೆಸಾರ್ಟ್‌ಗಳು ಮತ್ತು ಹೋಂಸ್ಟೇಗಳು ಅಣಬೆಗಳಂತೆ ತಲೆ ಎತ್ತುತ್ತಿವೆ. ಬಹುತೇಕ ಹೋಂಸ್ಟೇ ಹಾಗೂ ರೆಸಾರ್ಟ್‌ಗಳಲ್ಲಿ ಪ್ರವಾಸಿಗರಿಗೆ ಅಗತ್ಯವಾದ ಮೂಲಸೌಕರ್ಯಗಳಿಲ್ಲ.

ಹಲವು ಕಡೆಗಳಲ್ಲಿ ಪ್ರವಾಸಿಗರಿಂದ ದುಬಾರಿ ದರ ವಸೂಲಿ ಮಾಡಲಾಗುತ್ತಿದೆ ಎಂದು ಆರೋಪಿಸಿದರು. ಅಲ್ಲದೆ, ಜಿಲ್ಲೆಗೆ ಆಗಮಿಸುವ ಪ್ರವಾಸಿಗರು ಬಾಡಿಗೆ ಬೈಕ್‌ಗಳಲ್ಲಿ ಅತಿವೇಗವಾಗಿ ಸಂಚರಿಸುತ್ತಿರುವುದು ಕಂಡುಬರುತ್ತಿದೆ. ಇಂತಹ ಪ್ರವೃತ್ತಿಗಳಿಗೆ ಕಡಿವಾಣ ಹಾಕುವ ಅಗತ್ಯವಿದೆ ಎಂದು ಹೇಳಿದರು.